ಬೆಲೆ ರೂ.2.50
D.O.P - 15th of every month at Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in
**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.
Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಜೂನ್ 2015

II ಧಿಯೋ ಯೋನಃ ಪ್ರಚೋದಯಾತ್ II

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-15 ಸಂಚಿಕೆ-6 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

# ನಮ್ಮ ಶಾರದಾ ಮಂಟಪ....

ಯಾವುದೇ ಸಂಘ ಸಂಸ್ಥೆಗಳು ಅಥವಾ ಸಂಘಟನೆಗಳು ಅಭಿವೃದ್ಧಿಯ ಪಥದಲ್ಲಿ ನಡೆಯುವಂತಾಗಲು ಅಲ್ಲಿಕೆಲಸ ಮಾಡುವ ನಿರ್ದೇಶಕರು ಅಥವಾ ಪದಾಧಿಕಾರಿಗಳು ಮುನ್ನುಗ್ಗುವ ಧೈರ್ಯವಂತ ಮನದವರು ಮತ್ತು ಏಕ ಅಭಿಪ್ರಾಯ ಹೊಂದಿದವರಾಗಿರಬೇಕು. ಮಾಡುವ ಕೆಲಸವನ್ನು ನಿಷ್ಠೆ ಹಾಗೂ ಸೇವಾ ಮನೋಭಾವದಿಂದ ಸಂಸ್ಥೆಗೆ ಅರ್ಪಿಸಬೇಕು. ಆಗ ಮಾತ್ರ ಆ ಸಂಸ್ಥೆ ಎಗ್ಗಿಲ್ಲದೆ ಮುನ್ನಡೆ ಕಂಡು ಅಭಿವೃದ್ಧಿಯ ಪಥದಲ್ಲಿ ನಡೆಯಬಹುದು.

ಇಂತಹ ಸಂಘಟನೆಗೆ ಹೆಸರಾದುದು ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟು. ಶ್ರೀ ಶಾರದಾ ಮಂಟಪವನ್ನು ಕೇಂದ್ರವನ್ನಾಗಿಸಿ ಕೆಲಸಮಾಡುತ್ತಿರುವ ಈ ಸಂಘಟನೆಯು ಸಂಘದ ಸ್ಥಾಪಕರ ಆಶಯ ಮತ್ತು ಆದರ್ಶಗಳಿಗೆ ಧಕ್ಕೆಯಾಗದಂತೆ ಮುನ್ನಡೆಸಿಕೊಂಡು ಬಂದ ಕೀರ್ತಿ ಈ ಸಂಘದಲ್ಲಿ ಇದುವರೆಗೆ ಆಡಳಿತ ನಡೆಸಿಕೊಂಡು ಬಂದ ಹಲವು ಆಡಳಿತ ಮಂಡಳಿಗೆ ಸಲ್ಲುತ್ತದೆ. ಅಲ್ಲದೆ ನಮ್ಮ ಸಮಾಜದ ಗುರು ಪೀಠವೆನಿಸಿದ ಶ್ರೀ ಕ್ಷೇತ್ರ ಶೃಂಗೇರಿಯ ಶಾರದಾ ಪೀಠದ ಅಸ್ತಂಗತರಾದ ಹಿಂದಿನ ಜಗದ್ಗುರು ಶ್ರೀ ಶ್ರೀ ಶ್ರೀಮದಭಿನವ ವಿದ್ಯಾತೀರ್ಥ ಮಹಾ ಸನ್ನಿಧಾನಂಗಳವರು ಹಾಗೂ ಈಗಿನ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸನ್ನಿಧಾನಂಗಳವರ ಅಭಿಮತದಂತೆ ಉಡುಪಿ ಎಂದರೆ 'ನಮ್ಮ ಶಾರದಾ ಮಂಟಪ' ಎಂದು ಉದ್ಗಾರ ಬರುವುದು ನಮ್ಮ ಉಡುಪಿಯ ಈ ಸಂಘಟನೆಯ ಕಿರೀಟಕ್ಕೆ ಸಲ್ಲುವ ಹೆಮ್ಮೆಯ ಗರಿ ಎಂದರೆ ತಪ್ಪಲ್ಲ.

ಅಂತೆಯೇ ಉಡುಪಿಯಲ್ಲಿ ಈ ಸಂಘಟನೆಯು ತನ್ನ ಕಾರ್ಯವ್ಯಾಪ್ತಿ ಯನ್ನು ಬೆಳೆಸಿ ಅದೆಷ್ಟೋ ಸಮಾಜಮುಖಿ ಕೆಲಸಗಳನ್ನು ಮಾಡಿಕೊಂಡು ಬಂದಿದೆ. ಅವುಗಳನ್ನು ಈ ರೀತಿಯಲ್ಲಿ ವಿಶ್ಲೇಷಿಸಬಹುದು.

**ಶ್ರೀ ಶಾರದಾ ದೇವಸ್ಥಾನ** :– 1980ರಲ್ಲಿ ಶ್ರೀ ಶಾರದಾ ದೇವಸ್ಥಾನವನ್ನು ಆಗಿನ ಆಡಳಿತ ಮಂಡಳಿಯು ಸ್ಥಾಪಿಸುವರೆ ನಿರ್ಣಯ ಕೈಗೊಂಡು ಕೆಲಸ ಪ್ರಾರಂಭಿಸಿ, ಶ್ರೀ ಕ್ಷೇತ್ರ ಶೃಂಗೇರಿಯ ಜಗದ್ಗುರುಗಳ ದಿವ್ಯ ಹಸ್ತದಿಂದ ಶ್ರೀ ಶಾರದಾ, ಶ್ರೀ ಗಣಪತಿ, ಶ್ರೀ ಶಂಕರರ ಪ್ರತಿಷ್ಠಾ ಕಾರ್ಯವು ವಿಜೃಂಭಣೆಯಿಂದ ನೆರವೇರಿತು. ವರ್ಷಗಳು ಕಳೆದಂತೆ ಶ್ರೀ ದೇವಸ್ಥಾನಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚುತ್ತಾ, ನಡೆಯುವ ಧಾರ್ಮಿಕ ಕಾರ್ಯಗಳೂ ಹೆಚ್ಚಾಯಿತು. ಇದರಿಂದ ದೇವಳದ ಒಳಗಿನ ಸ್ಥಳಾವಕಾಶ ಕಡಿಮೆಯಾಗುವುದೆಂದು ಮನವರಿಕೆಯಾಯಿತು. ಮತ್ತೆ ಆಗಿನ ಆಡಳಿತ ಮಂಡಳಿಯು ತೀರ್ಮಾನ ಕೈಗೊಂಡು 2000ನೇ ಸಾಲಿನಲ್ಲಿ ದೇವಸ್ಥಾನವನ್ನು ನವೀಕರಿಸಿ ದೊಡ್ಡ ಸ್ಥಳಾವಕಾಶದ ದೇವಸ್ಥಾನದ ಗರ್ಭಗುಡಿ ಮತ್ತು ಮೇಲೆ ಸುಂದರ ಗೋಪುರ ನಿರ್ಮಾಣವನ್ನು ಮಾಡಿ ಮತ್ತೆ ಜಗದ್ಗುರುಗಳನ್ನು ಆಹ್ವಾನಿಸಿ, ಪುನ:ಪ್ರತಿಷ್ಠೆ– ಬ್ರಹ್ಮಕುಂಭಾಭಿಷೇಕ ನೆರವೇರಿಸಿದ್ದು ದೊಡ್ಡ ಕೆಲಸವೇ ಸರಿ. ಶ್ರೀ ದೇವಸ್ಥಾನದಲ್ಲಿ ಕಾಲ ಕಾಲಕ್ಕೆ ಅರ್ಚಕರ ನೇಮಕ, ಅಲ್ಲಿ ನಡೆಯುವ ಧಾರ್ಮಿಕ ಪ್ರಕ್ರಿಯೆಗಳು, ಭಜನೆ, ಪಾರಾಯಣ ಮೊದಲಾದ ಪೂಜಾ ಕಾರ್ಯದಲ್ಲೂ ಆಯಾಯ ಆಡಳಿತ ಮಂಡಳಿಗಳ ಕೊಡುಗೆ ಬಹಳಷ್ಟಿದೆ.

**ಜ್ಞಾನಮಂದಿರ** :– ಸಮಾಜದ ಸದಸ್ಯರ ಬೇಡಿಕೆಯಂತೆ ಸಣ್ಣ ಪುಟ್ಟ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗುವಂತೆ ಜ್ಞಾನಮಮಂದಿರ ನಿರ್ಮಾಣ ಮಾಡಲಾಯಿತು. ಅಲ್ಲದೆ ಅದರಲ್ಲಿ 'ರತ್ನಸ್ಮೃತಿ' ಸಭಾಭವನ ಮತ್ತು ಮೇಲ್ಛಾವಣಿಯಲ್ಲಿ ಊಟದ ಹಾಲ್ ನಿರ್ಮಾಣ ಮಾಡಲಾಗಿದೆ. ಇತ್ತೀಚೆಗೆ ಜ್ಞಾನಮಂದಿರಕ್ಕಾಗಿ ಬೇರೆಯೇ ಊಟದ ಏರ್ಪಾಡು ಮಾಡಲು ಪ್ರತ್ಯೇಕ ಅಡುಗೆಮನೆ ನಿರ್ಮಾಣ, ಅಡುಗೆ ಹಾಗೂ ಬಡಿಸುವ ಪಾತ್ರೆ ಖರೀದಿ, ಊಟದ ಟೇಬಲ್–ಕುರ್ಚಿ ವ್ಯವಸ್ಥೆ ಮಾಡಿದ್ದು, ಸುಮಾರು 200ಜನರ ಸಮಾರಂಭಗಳನ್ನು ನಡೆಸುವರೆ ಸಾಧ್ಯವಾಗುವಂತೆ ಅಭಿವೃದ್ಧಿ ಪಡಿಸಿದ್ದು ಸಮಾಜ ಬಾಂಧವರಿಂದ ಹಾಗೂ ಇತರರಿಂದಲೂ ಕೊಂಡಾಡಲ್ಪಟ್ಟಿದೆ.

**ಶ್ರೀ ಶಾರದಾ ಮಂಟಪದ ನವೀಕರಣ:–** ಉಡುಪಿಯಲ್ಲಿ ಉಳಿದೆಲ್ಲಾ ಕಲ್ಯಾಣ ಮಂಟಪಕ್ಕಿಂತಲೂ ಅತಿ ಹೆಚ್ಚಿನ ಬೇಡಿಕೆಯಲ್ಲಿರುವ ಶ್ರೀ ಶಾರದಾ ಮಂಟಪವನ್ನು ಕಾಲ ಕಾಲಕ್ಕೆ ನವೀಕರಿಸಿದ್ದು, ಜನರ ಬೇಡಿಕೆಯು ಇನ್ನೊಂದು ಭಾಗ. ಪ್ರಧಾನ ವೇದಿಕೆಯನ್ನು ಸುಂದರಗೊಳಿಸಿದ್ದು, ಸಭಾಂಗಣದ ಮೇಲ್ಛಾವಣಿಗೆ ಸೀಲಿಂಗ್ ಅಳವಡಿಕೆ, ಸಭಾಂಗಣದ ಒಳಗೋಡೆಯನ್ನು ಸರಿಸಿ ವಿಸ್ತರಣೆ ಹಾಗೂ ಮೂರು ಬದಿಯಿಂದ ಸುಂದರ ಬಾಲ್ಕನಿ ರಚನೆ, ಅಗಲವಾದ ಕಿಟಿಕಿಗಳೊಂದಿಗೆ ಉತ್ತಮ ಗಾಳಿ ಬೆಳಕಿನ ವ್ಯವಸ್ಥೆ ಇವುಗಳಿಂದ ಮಂಟಪದ ಬೇಡಿಕೆ ಮತ್ತೂ ಹೆಚ್ಚಾಗಲು ಕಾರಣವಾಯಿತು.

**ದೇವಳದ ಮುಂಭಾಗದಲ್ಲಿ ಗೋಪುರ ನಿರ್ಮಾಣ:–** ದೇವಸ್ಥಾನದ ಮುಂಭಾಗದಲ್ಲಿ ಸುಂದರ ಗೋಪುರ ನಿರ್ಮಾಣ ಮಾಡಿದ್ದಲ್ಲದೆ, ಮುಂಭಾಗದ ಅಂಗಳಕ್ಕೆ ಇಂಟರ್‌ಲಾಕ್ ಅಳವಡಿಸಿದ್ದರಿಂದ ದೇವಳದ ಸುಂದರತೆ ಮತ್ತಷ್ಟು ಹೆಚ್ಚಿದೆ.


**ಅರ್ಚಕರ ಮನೆ ನಿರ್ಮಾಣ** :– ಸಭಾಭವನದ ವೇದಿಕೆಯ ಮೇಲ್ಛಾವಣಿಯಲ್ಲಿರುವ ಖಾಲಿ ಸ್ಥಳದಲ್ಲಿ ಅರ್ಚಕರಿಗಾಗಿ ಮನೆ ನಿರ್ಮಿಸಿದ್ದು, ಅಲ್ಲಿಯೇ ಇನ್ನೊಂದನ್ನು ಆಡಳಿತ ಮಂಡಳಿಯ ಸಭೆನಡೆಸಲು ಸಾಧ್ಯವಾಗುವಂತೆ ನಿರ್ಮಿಸಿ ಅದನ್ನು ಸದ್ವಿನಿಯೋಗ ಮಾಡಲಾಗುತ್ತಿದೆ. ಈ ಮೂಲಕ ಇದ್ದ ಸ್ಥಳದ ಸದುಪಯೋಗ ಮಾಡಿಕೊಂಡಂತೆ ಆಗಿದೆ.

**ಜನರೇಟರ್ ಮತ್ತು ವಿದ್ಯುದೀಕರಣ:–** ದೇವಸ್ಥಾನ, ಜ್ಞಾನಮಂದಿರ ಮತ್ತು ಮಂಟಪಕ್ಕೆ ಪ್ರತ್ಯೇಕ ವಿದ್ಯುತ್ ವ್ಯವಸ್ಥೆ ಇರಬೇಕಾದ ಅನಿವಾರ್ಯತೆ ಇರುವುದರಿಂದ ಅದಕ್ಕಾಗಿ ಎರಡು ಜನರೇಟರ್‌ಗಳ ಅಳವಡಿಸುವಿಕೆಯನ್ನು ಮಾಡಲಾಗಿದೆ. ಈ ಮೂಲಕ ವಿದ್ಯುತ್ ಕೊರತೆಯನ್ನು ನಿವಾರಿಸಲಾಗಿದೆ.

**ಶೌಚಾಲಯಗಳ ನವೀಕರಣ:–** ಬಹಳ


(6ನೇ ಪುಟಕ್ಕೆ...)

## ರಾಜ್ಯ ಹಿಂದೂ ಧಾರ್ಮಿಕ ಪರಿಷತ್ತಿನ ಸದಸ್ಯರಾಗಿ ಶ್ರೀ ಎನ್ ಕೆ ಜಗನ್ನಿವಾಸರಾವ್



ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ಕಾರ್ಯದರ್ಶಿಗಳಾದ ಪುತ್ತೂರಿನ ನೋಟರಿ ನ್ಯಾಯವಾದಿ ಶ್ರೀ ಎನ್.ಕೆ.ಜಗನ್ನಿವಾಸ ರಾವ್ ಇವರನ್ನು ಕರ್ನಾಟಕ ಹಿಂದೂ ಧಾರ್ಮಿಕ ಪರಿಷತ್ತಿನ ಸದಸ್ಯರನ್ನಾಗಿ ಕರ್ನಾಟಕ ಸರಕಾರವು ನೇಮಕ ಮಾಡಿರುತ್ತದೆ. ರಾಜ್ಯಾದ್ಯಂತ ಕಾರ್ಯಾಚರಿಸಲಿರುವ ಈ ಧಾರ್ಮಿಕ ಪರಿಷತ್ತಿನಲ್ಲಿ ಅಧ್ಯಕ್ಷರಾಗಿ ಸರಕಾರದ ಧಾರ್ಮಿಕ ದತ್ತಿ ಸಚಿವರು, ಉಪಾಧ್ಯಕ್ಷರಾಗಿ ಇಲಾಖಾ ಕಾರ್ಯದರ್ಶಿಗಳು, ಕಾರ್ಯದರ್ಶಿಗಳಾಗಿ ಇಲಾಖಾ ಆಯುಕ್ತರು ಹಾಗೂ ರಾಜ್ಯದ ವಿವಿಧ ಜಿಲ್ಲೆಗಳ ತಜ್ಞರನ್ನೊಳಗೊಂಡ ಐವರು ಸದಸ್ಯರಲ್ಲಿ ಓರ್ವ ಸದಸ್ಯರಾಗಿ ಶ್ರೀ ಎನ್.ಕೆ. ಜಗನ್ನಿವಾಸರಾಯರು ಆರಿಸಲ್ಪಟ್ಟಿದ್ದಾರೆ. ಶ್ರೀಯುತರು ಪುತ್ತೂರು ಮಹಾಲಿಂಗೇಶ್ವರ ದೇವಸ್ಥಾನದ ಮುಕ್ತೇಸರರಾಗಿ, ಆಡಳಿತ ಮುಕ್ತೇಸರರಾಗಿ ಪುತ್ತೂರು ಶಿವ ಬ್ರಾಹ್ಮಣ ಸಮಾಜ ಸೇವಾ ಸಂಘದ ಅಧ್ಯಕ್ಷರಾಗಿ,ಮಂಗಳೂರಿನ ಸುಬ್ರಹ್ಮಣ್ಯ ಸಭಾದ ಮಾಜಿ ಅಧ್ಯಕ್ಷರಾಗಿ, ಪ್ರಸ್ತುತ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಎನ್.ಕೆ.ಜಗನ್ನಿವಾಸರಾಯರ ಅವಧಿಯಲ್ಲಿ ಧಾರ್ಮಿಕ ದತ್ತಿ ಪರಿಷತ್ತು ಹೆಚ್ಚಿನ ಶ್ರೇಯಸ್ಸನ್ನು ಗಳಿಸಲಿ ಎಂದು ಹಾರೈಸುತ್ತಾ ಅವರಿಗೆ ಸಮಾಜವು ಅಭಿನಂದನೆ ಸಲ್ಲಿಸುತ್ತದೆ.

## ಎಸ್.ಎಂ.ಎಸ್ ಕಾಲೇಜಿನ ಪ್ರಾಂಶುಪಾಲರಾಗಿ ಡಾ॥ ವೈ ರವೀಂದ್ರನಾಥ ರಾವ್



ಬ್ರಹ್ಮಾವರದ ಎಸ್.ಎಂ.ಎಸ್.ಕಾಲೇಜಿನಲ್ಲಿ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ, ಕಳೆದ ವರ್ಷ ಉಪಪ್ರಾಂಶುಪಾಲರಾಗಿ ಒಟ್ಟು 35 ವರ್ಷಗಳ ಬೋಧನಾನುಭವ ಹೊಂದಿರುವ ಡಾ। ವೈ. ರವೀಂದ್ರನಾಥ ರಾವ್ ಅವರು ಪ್ರಸ್ತುತ ಪ್ರಾಂಶುಪಾಲರಾಗಿ ಅಧಿಕಾರ ಸ್ವೀಕರಿಸಿದ್ದಾರೆ. ದ.ಆಫ್ರಿಕಾ, ಸ್ವೀಡನ್ ಮತ್ತು ಜಪಾನ್ ದೇಶಗಳ ಸಹಿತ ರಾಷ್ಟ್ರ ಹಾಗೂ ವಿಶ್ವಮಟ್ಟದಲ್ಲಿ 45ಕ್ಕಿಂತಲೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಮಂಡಿಸಿ, ಗೋಷ್ಠಿಗಳ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಪಿಹೆಚ್‌ಡಿ/ಎಂ.ಫಿಲ್ ವಿದ್ಯಾರ್ಥಿಗಳಿಗೆ, ಶಿಕ್ಷಣ ಇಲಾಖೆಯ ಅನೇಕ ಮೌಲ್ಯಮಾಪನ ಸಂಶೋಧನೆಗಳಿಗೆ ಮತ್ತು ವಿಶ್ವಕೊಂಕಣಿ ಕೇಂದ್ರದ ಬೃಹತ್ ಸಮೀಕ್ಷಾ ಕಾರ್ಯಗಳಿಗೆ ಮಾರ್ಗದರ್ಶನ ನೀಡಿರುವ/ನೀಡುತ್ತಿರುವ ಇವರು ಯುಜಿಸಿ ಪ್ರಾಯೋಜಿತ ಸಂಶೋಧನೆಗಳನ್ನು ನಡೆಸಿದ್ದಾರೆ. ಸಂಗೀತ, ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಡಾ। ರಾವ್ ಅವರು ಬರೆದ ಅನೇಕ ಕೃತಿಗಳು, ಪಠ್ಯಗಳು ಮತ್ತು ಸಂಶೋಧನಾತ್ಮಕ ಲೇಖನಗಳು ಪ್ರತಿಷ್ಠಿತ ಪತ್ರಿಕೆಗಳಲ್ಲಿ ಮತ್ತು ಸಂಪಾದಿತ ಕೃತಿಗಳಲ್ಲಿ ಪ್ರಕಟವಾಗಿವೆ. ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಮಾಜಿ ನಿರ್ದೇಶಕರಾಗಿಯೂ ಪ್ರಸ್ತುತ ಶಿಕ್ಷಣ ಮತ್ತು ತರಬೇತಿ ವೇದಿಕೆಯ ಅಧ್ಯಕ್ಷರಾಗಿಯೂ ಇರುವ ಡಾ। ವೈ.ರವೀಂದ್ರನಾಥ ರಾವ್‌ರವರಿಗೆ ಶ್ರೀ ಶಾರದಾ ಶುಭ ಹಾರೈಕೆಗಳು.

# ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.), ಮಂಗಳೂರು

## ರಾಜ್ಯ ಸರಕಾರದ ಜಾತಿಗಣತಿ–ಮಾಹಿತಿ

ಕಳೆದ ಎರಡು ತಿಂಗಳ "ಶ್ರೀ ಶಾರದಾ" ಪತ್ರಿಕೆಯಲ್ಲಿ ಸರಕಾರದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಬಗ್ಗೆ ನೀಡಿದ ಮಾಹಿತಿಯಂತೆ ಸಮಾಜ ಬಾಂಧವರು ಗಣತಿದಾರರಿಗೆ ತಮ್ಮ ಮನೆಯ, ಕುಟುಂಬದ ಮಾಹಿತಿಯನ್ನು ನೀಡಿರುತ್ತೀರಿ.

ಈಗ ನಾವು ನೀಡಿದ ಮಾಹಿತಿಯು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಕೈಯಲ್ಲಿದೆ. ಈ ಮಾಹಿತಿಯನ್ನು ಪರಿಶೀಲಿಸಿದ ಆಯೋಗವು ನಮ್ಮ ಜಾತಿಯನ್ನು ಯಾವ ಪ್ರವರ್ಗಕ್ಕೆ ಸೇರಿಸಬೇಕೆಂದು ಪರಿಶೀಲಿಸಿ ಸರಕಾರಕ್ಕೆ ಶಿಫಾರಸ್ಸು ಮಾಡುತ್ತದೆ. ಈ ಕೆಲಸಕ್ಕೆ ಒಂದೆರಡು ತಿಂಗಳ ಕಾಲಾವಕಾಶವಿದೆ. ಅದರೊಳಗೆ ನಮ್ಮ ಸಮಾಜ ಬಾಂಧವರು ಮತ್ತು ನಮ್ಮ ಸಂಘಟನೆಗಳು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಿಗೆ ವೈಯಕ್ತಿಕ ಅಥವಾ ಸಾಮೂಹಿಕ ಅಲ್ಲದೆ ಎಲ್ಲಾ ಸಂಘಟನೆಗಳ ಮೂಲಕವೂ ಪತ್ರ ಬರೆದು ವಿನಂತಿಸಿಕೊಳ್ಳಬೇಕಾದ ಅನಿವಾರ್ಯತೆಯೂ ಇದೆ. ರಾಜ್ಯ ಸರಕಾರವು ನೇಮಿಸಿದ ಆಯೋಗಕ್ಕೆ ಎಲ್ಲರೂ ಕೆಳಗೆ ಕೊಟ್ಟಂತೆ ಆಯೋಗದ ಅಧ್ಯಕ್ಷರಿಗೆ ಪತ್ರ ಬರೆಯುವ ಆಂದೋಲನವೊಂದನ್ನು ಮಾಡಬೇಕೆಂದು ವಿನಂತಿ. ಈ ಬಗ್ಗೆ ಕಳೆದ ತಿಂಗಳ ಶ್ರೀಶಾರದಾ ಪತ್ರಿಕೆಯ ಸಂಚಿಕೆಯಲ್ಲಿ ವಿವರವನ್ನು ನೀಡಿರುತ್ತದೆ. ಅದರಂತೆ ಆಯೋಗಕ್ಕೆ ಪ್ರತಿ ಸಂಘ ಹಾಗೂ ಸಂಘಟನೆಗಳು ಪತ್ರವನ್ನು ಬರೆಯಬೇಕೆಂದು ಸ್ಥಾನಿಕ ಬ್ರಾಹ್ಮಣ ಮಹಾಮಂಡಲವು ಸಮಾಜದ ಎಲ್ಲಾ ಸಂಘಟನೆಗಳು ಮತ್ತು ಸಮಾಜ ಬಾಂಧವರಿಗೆ ವಿನಂತಿಸಿಕೊಳ್ಳುತ್ತದೆ. (ಪತ್ರವನ್ನು ಜುಲೈ 30ರ ಒಳಗೆ ಆಯೋಗದ ಅಧ್ಯಕ್ಷರಿಗೆ ಕಳುಹಿಸಿದರೆ ಮಾತ್ರ ಪ್ರಯೋಜನ ಬೀಳುತ್ತದೆ).

– ಅಧ್ಯಕ್ಷರು ಮತ್ತು ಕಾರ್ಯದರ್ಶಿ
ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.), ಮಂಗಳೂರು

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶಾನುಭಾಗ್, ವಿ.ಪಿ.ನಗರ
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

-ಸಂಪಾದಕ ಮಂಡಳಿ

**(ಪತ್ರದ ಮಾದರಿ)**

ರಿಗೆ,

**ಅಧ್ಯಕ್ಷರು**
ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ
ನ.16–ಡಿ, ಡಿ.ದೇವರಾಜ ಅರಸು ಭವನ, 2ನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ,
ವಸಂತ ನಗರ, ಬೆಂಗಳೂರು–560052. ಇ–ಮೈಲ್ : **kscbcb@gmail.com**

ರಿಂದ,

**ಅಧ್ಯಕ್ಷರು**
(ಸಂಘಟನೆಯ ಅಥವಾ ವೈಯಕ್ತಿಕ ಹೆಸರು ಮತ್ತು ವಿಳಾಸ)

ಮಾನ್ಯರೇ,

**ವಿಷಯ : ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಆಧಾರದಂತೆ ಸ್ಥಾನಿಕ ಬ್ರಾಹ್ಮಣ ಸಮುದಾಯವನ್ನು ಹಿಂದಿನಂತೆಯೇ ಪ್ರವರ್ಗ–॥(ಎ)ಗೆ ಸೇರಿಸುವಂತೆ ಮನವಿ**

★★★ ★★★


ಸ್ಥಾನಿಕ ಬ್ರಾಹ್ಮಣ ಜಾತಿಯು (ಸರಕಾರವು ಪ್ರಕಟಿಸಿದ ಜಾತಿ ಪಟ್ಟಿಯಲ್ಲಿದ್ದಂತೆ ಸಂಖ್ಯೆ ಎ1177) ತಮಗೆ ಸಮೀಕ್ಷೆಯಲ್ಲಿ ಸಿಕ್ಕಿದ ಅಂಕಿ ಅಂಶಗಳ ಪ್ರಕಾರ ಅಲ್ಪಸಂಖ್ಯಾತ ಜಾತಿಯಾಗಿರುತ್ತದೆ ಹಾಗೂ ಎಲ್ಲಾ ಮೂಲಗಳಿಂದಲೂ ಪರಿಶೀಲಿಸಿದಾಗ ಸರಕಾರದ ಮೀಸಲಾತಿ ಸೌಲಭ್ಯ ಪಡೆಯಲು ಅರ್ಹ ಜಾತಿಯಾಗಿರುತ್ತದೆ. ಅಲ್ಲದೆ ಸರಕಾರವು ಹಿಂದೆ ಈ ಸ್ಥಾನಿಕ ಬ್ರಾಹ್ಮಣ ಜಾತಿಯನ್ನು ಪ್ರವರ್ಗ ॥(ಎ) ಪಟ್ಟಿಯಲ್ಲಿಯೇ ಸೇರಿಸಿದ್ದು, ಈ ಸಮೀಕ್ಷೆಗಿಂತಲೂ ಮೊದಲ ಕಟ್ಟಕಡೆಯ ಸರ್ಕಾರಿ ಆದೇಶ ಸಕಇ 225 ಬಿಸಿಎ 2000, ಬೆಂಗಳೂರು, ದಿನಾಂಕ 30ನೇ ಮಾರ್ಚ್ 2002ರಂತೆ ಪ್ರವರ್ಗ ॥(ಎ) ಪಟ್ಟಿಯಲ್ಲಿ ಕ್ರಮಸಂಖ್ಯೆ 100ರಲ್ಲಿ ಗುರುತಿಸಿಕೊಂಡಿದೆ. ಆದ್ದರಿಂದ "ಸ್ಥಾನಿಕ ಬ್ರಾಹ್ಮಣ"(ಸಂಖ್ಯೆ ಎ1177) ಮತ್ತು ಪರ್ಯಾಯ ಹೆಸರು "ಸ್ಥಾನಿಕ" (ಸಂಖ್ಯೆ ಎ1176) ಇವುಗಳನ್ನು ಪ್ರವರ್ಗ॥(ಎ) ಗೆ ಸೇರಿಸುವಂತೆ ಸರಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ಇತೀ ವಂದನೆಗಳೊಂದಿಗೆ,

ದಿನಾಂಕ: ......................
ಸ್ಥಳ : ......................

ತಮ್ಮ ವಿಶ್ವಾಸಿ
(ಸಹಿ)

# ಕನ್ನಡ ಕವಿಕಾವ್ಯ ಪರಿಚಯ–೧೧ : ಷಟ್ಪದಿ ಕವಿ ರಾಘವಾಂಕ–5



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

(ಕಳೆದ ಸಂಚಿಕೆಯಿಂದ)

**ಸೋಮನಾಥ ಚರಿತೆ :**

ಕವಿ ರಾಘವಾಂಕನು ಬರೆದಿರುವ ವೀರೇಶ ಚರಿತೆ, ಸಿದ್ಧರಾಮ ಪುರಾಣ, ಸೋಮನಾಥ ಚರಿತೆ – ಈ ಗ್ರಂಥಗಳಲ್ಲಿ ಸೋಮನಾಥ ಚರಿತೆಗಿಂತಲೂ ಸಿದ್ಧರಾಮ ಪುರಾಣದ ವಿಷಯವು ಹೆಚ್ಚು ಗಂಭೀರವಾಗಿದೆ. ಗುರು ಭಕ್ತಿ ñ ಗೌರವಗಳಿಂದ ಕೂಡಿದೆ; ಇದರಲ್ಲಿ ಕೀಳುಭಾವಗಳಾಗಲಿ, ಸಡಿಲವಾದ ಸಂಗತಿಗಳಾಗಲಿ, ಮತ ವೈಷಮ್ಯ ಪ್ರದರ್ಶನಕ್ಕಾಗಲಿ ಅವಕಾಶವಿಲ್ಲ. ಅತಿಶಯೋಕ್ತಿ ಹೆಚ್ಚಾಗಿಲ್ಲ. ಇದರ ನಾಯಕನು ಘಟಿಕೆ, ಮೂಲಿಕೆ, ಅಂಜನ, ವಾದ, ವಶ್ಯ, ಕಾಲವಂಚನ, ಮಾರಣ ಪರಕಾಯ ಪ್ರವೇಶ ಮುಂತಾದುವುಗಳನ್ನು ಬಯಸುವ ವಿಕಾರಿ ಸಿದ್ಧನಲ್ಲ. ಈ ಚರಿತ್ರೆಯಲ್ಲಿ ಸಿದ್ಧರು, ಸಾಧುಗಳು, ಅವತಾರ ಪುರುಷರು ಎಂದು ಗಣ್ಯರಾದವರ ಜೀವನಗಳಿಂದ ಸಾಮಾನ್ಯವಾಗಿ ಜನರು ಮೆಚ್ಚಿ ಆರಿಸಿಕೊಂಡು ಪ್ರತಿಪಾದಿಸುವಂಥ ಸಂಗತಿಗಳೇ ಇವೆ. ಇಂಥ ಚರಿತ್ರೆಗಳು ಬರುಬರುತ್ತ ಮಹತ್ವದಿಂದ ಕೂಡಿಕೊಂಡು ಅದ್ಭುತಗಳ ಬೀಡಾಗುವುವೆಂಬುದು ತಿಳಿದ ವಿಷಯ. ಈ ದೃಷ್ಟಿಯಿಂದ ಪರಿಶೀಲಿಸಿದರೆ ಈ ಕಾವ್ಯವು ಇನ್ನೂ ಸಿದ್ಧರಾಮನು ಮುಕ್ತನಾದ ಹೊಸದರಲ್ಲಿಯೇ ಬರೆದಂತೆ, ತೋರುತ್ತದೆ.

'ಸೋಮನಾಥ ಚರಿತೆ'ಯು ನಿಜವಾಗಿ ನೋಡಲು 'ಆದಯ್ಯನ ಚರಿತೆ' ಇದರಲ್ಲಿ ಕವಿಸಮಯವನ್ನನುಸರಿಸಿ ಪುರವರ್ಣನೆ, ನವವರ್ಣನೆ, ಸ್ತ್ರೀವರ್ಣನೆ ಮುಂತಾದ ವಿಸ್ತಾರವಾದ ವರ್ಣನೆಗಳಿವೆ. ಆದಯ್ಯನು ಅವತಾರ ಪುರುಷ, ಶಿವಭಕ್ತ ಎಂದು ವರ್ಣಿತನಾಗಿದ್ದರೂ. ಸೋಮಯ್ಯ ಸೋಮಯ್ಯನೆನ್ನುತ್ತ ಸೋಮನಾಥನ ಸ್ತುತಿ ಮಾಡಿದ್ದರೂ, ಅವನಲ್ಲಿ ಸಿದ್ಧರಾಮನ ಘನತೆ ಗುರುತ್ವಗಳಿಲ್ಲ. ಸಿದ್ಧರಾಮನ ಸ್ವಾರ್ಥತ್ಯಾಗ, ಪರೋಪಕಾರ ಬುದ್ಧಿ, ಪಾರಲೌಕಿಕ ವಿಚಾರ, ನಿತ್ಯಾನಿತ್ಯ ವಿವೇಕ ಮುಂತಾದ ಮಹಾಪುರುಷ ಗುಣಗಳು ಕಂಡು ಬರುವುದಿಲ್ಲ. ಅವನಲ್ಲಿ ಆ ಪೂಜ್ಯಭಾವಮುಂಟಾಗುವುದಿಲ್ಲ. ಆದಯ್ಯನ ಚರಿತ್ರೆಯನ್ನು ರಾಘವಾಂಕನ ಗುರುವೂ, ಸೋದರ ಮಾವನೂ ಆದ ಹರಿಹರನು 'ರಗಳೆ'ಯ ರೂಪವಾಗಿ ಬರೆದಿರುವನು. ಇದರ ಪ್ರಕಾರ, ಆದಯ್ಯನು ಹುಟ್ಟಿದ್ದು ಶಿವಪುರದಲ್ಲಿ; ಅವನ ತಾಯಿ–ತಂದೆಯರು 'ಶಿವಭಕ್ತಿ' ಮತ್ತು 'ಶಿವಭಕ್ತ'. ಅವನ ಮಾವನು 'ಪಾರಿಷ ಪಂಡಿತ' ಆದಯ್ಯನು ಪುಲಿಗೆರೆಗೆ ಹೋದಾಗ ಅವನು ಸುರಹೊನ್ನೆಯ ಬಸದಿಯಲ್ಲಿ ಪೂಜಾರಿಯಾಗಿದ್ದನು. ಸೋಮನಾಥನನ್ನು ತಂದಿರಿಸಿದ ಮೇಲೆ ಆದಯ್ಯನು ಪುಷ್ಪಕ ವಿಮಾನದಲ್ಲಿ ಕೈಲಾಸಕ್ಕೆ ಹೋದನು. ಒಟ್ಟಿನಲ್ಲಿ ಈ ಗ್ರಂಥದಲ್ಲಿ ಸೋಮನಾಥ ಚರಿತೆಗಿಂತ ಸಮತಾಭಿಮಾನವೂ, ಪರಮತ ದೂಷಣವೂ ಹೆಚ್ಚಾಗಿ ಕಾಣುತ್ತವೆ. ಕಾವ್ಯಗುಣಗಳೇನೂ ಹೆಚ್ಚಾಗಿಲ್ಲ.

ಸಿದ್ಧರಾಮ ಪುರಾಣದ ಕೊನೆಯಲ್ಲಿ ಸಿದ್ಧರಾಮನು ಮೃತನಾದನೆಂದು ಸ್ಪಷ್ಟವಾಗಿ ಹೇಳಿಲ್ಲ. 'ಅರರೆ ತನುವೆರಸಿ....ಎಲ್ಲ ಧರೆಯರಿಯಲಿಂತು ಸೊನ್ನಲಿಗೆಯಲಿ ನಲಿಯುತಿಹ ಸಿರಿಯಾಣ್ಮ'ಎಂಬ ಪೀಠಿಕಾ ಭಾವನ್ನು ನೋಡಿದರೆ ಸಿದ್ಧರಾಮನು ಬದುಕಿದ್ದಾಗಲೇ ಈ ಗ್ರಂಥವು ರಚಿತವಾಯಿತೋ ಎಂಬ ಸಂದೇಹ ಬರುತ್ತದೆ. 'ಸಿದ್ಧರಾಮನು ಸತ್ತಿಲ್ಲ; ಜೀವಂತವಾಗಿ ಸಮಾಧಿಯಲ್ಲಿ ನೆಲಸಿದ್ದಾನೆ' ñ ಎಂದು ಜನರು ನಂಬಿದ್ದರೂ ಇದ್ದಿರಬಹುದು.

ಇದರ ಆದಿಯಲ್ಲಿ ವಿರೂಪಾಕ್ಷ ಸ್ತುತಿಯಲ್ಲಿ; ಪೀಠಿಕೆಯು ಸೂಕ್ಷ್ಮವಾಗಿದೆ; ಗ್ರಂಥವು ಸರಳವಾಗಿದೆ; ಷಟ್ಪದಿಯ ರಚನೆಯಲ್ಲಿ ಅಷ್ಟೊಂದು ನಯವಿಲ್ಲ. ಓಟವಿಲ್ಲ. ಆದ್ದರಿಂದ ಇದೇ ರಾಘವಾಂಕನ ಮೊದಲನೆಯ ಕಾವ್ಯವಾಗಿದ್ದರೂ ಇರಬಹುದು ಎನ್ನಿಸುತ್ತದೆ.


ಕವಿ ರಾಘವಾಂಕನು 'ಹರಿಶ್ಚಂದ್ರ ಕಾವ್ಯವೂ ಸೇರಿದಂತೆ ಒಟ್ಟು ರಚಿಸಿದ ಕೃತಿಗಳ ಸಂಖ್ಯೆ ಆರು. ಇವುಗಳಲ್ಲಿ ಮೂರನ್ನು ನಾವು ವಿಮರ್ಶಿಸಿದೆವು. (ವೀರೇಶ ಚರಿತೆ, ಸೋಮನಾಥ ಚರಿತೆ ಮತ್ತು ಸಿದ್ಧರಾಮ ಪುರಾಣ) 'ಶರಭ ಚಾರಿತ್ರೆ' ಮತ್ತು 'ಹರಿಹರ ಮಹತ್ವ' ಇವುಗಳು ಸಿಕ್ಕಿಲ್ಲ. ಹಿರಣ್ಯಕಶಿಪುವಿನ ರಕ್ತಪಾನದಿಂದ ಮತ್ತನಾದ ನರಸಿಂಹನನ್ನು ವೀರಭದ್ರನು ಶರಭಾಕಾರದಿಂದ ಶಿಕ್ಷಿಸಿದ ಕಥೆಯು 'ಶರಭ ಚಾರಿತ್ಯ'ದಲ್ಲಿ ವರ್ಣಿತವಾದಂತಿದೆ. 'ಹರಿಹರ ಮಹತ್ವ'ದಲ್ಲಿ ಹಂಪೆಯ ಹರೀಶ್ಚಂದ್ರನ ಮಾಹಾತ್ಮ್ಯವು ವರ್ಣಿತವಾಗಿರುವಂತೆ ತಿಳಿದು ಬರುತ್ತದೆ.

'ಹರಿಶ್ಚಂದ್ರ ಕಾವ್ಯ'ದ ವಿಮರ್ಶೆಯನ್ನು ಮುಂದೆ ನೋಡೋಣ..

(ಮುಂದುವರಿಯುವುದು...)

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠಲರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘುವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ.

## ಜೀವನದ ವಿವಿಧ ಸ್ತರಗಳ ಆಗರ "ಅಖಾಡ" : ಡಾ| ಹೆಗ್ಗಡೆ



ಆನೆಯನ್ನೂ ಅಣುವಿನಲ್ಲಿ ತುಂಬಿಸಲು ಶಕ್ತವಾಗಿರುವ ಸಾಹಿತ್ಯದ ಮೂಲಕ ಜೀವನದ ವಿವಿಧ ಸ್ತರಗಳನ್ನು ಎಂ.ಆರ್. ವಾಸುದೇವ ಅವರು ತನ್ನ ಕವನ ಸಂಕಲನ 'ಅಖಾಡ'ದ ಮೂಲಕ ಬಿಂಬಿಸಿದ್ದಾರೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ| ಡಿ. ವೀರೇಂದ್ರ ಹೆಗ್ಗಡೆ ಅಭಿಪ್ರಾಯಪಟ್ಟರು.

ನಗರದ ಕೊಡಿಯಾಲ್‌ಬೈಲ್‌ನ ಜೈಲು ರಸ್ತೆಯ ಬಳಿಯಿರುವ ಸುಬ್ರಹ್ಮಣ್ಯ ಸಭಾಂಗಣದಲ್ಲಿ ಮಾರ್ಪಳ್ಳಿ ಪ್ರಕಾಶನದ ಎಂ.ಆರ್. ವಾಸುದೇವ ರಚಿತ 'ಅಖಾಡ' ಕವನ ಸಂಕಲನವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು. ಬದುಕಿನ ಸಮಸ್ಯೆ, ಆಕಾರ- ವಿಕಾರ, ತತ್ವ, ಸಂತೋಷ ಮುಂತಾದ ಹಲವು ಭಾವನೆಗಳನ್ನು ಕವನದ ಮೂಲಕ ಅಭಿವ್ಯಕ್ತಪಡಿಸಿರುವ ಅವರು ಧರ್ಮ, ನಂಬಿಕೆ-ನಡವಳಿಕೆ, ಕಾಂಚನ ಮುಂತಾದವುಗಳ ಚಿತ್ರಣವನ್ನು ನೀಡಿದ್ದಾರೆ. ಜೀವನದಲ್ಲಿ ಕಷ್ಟಗಳನ್ನು ಎದುರಿಸಿಕೊಂಡು ಬೆಳೆದ ಅವರಲ್ಲಿ ಸಾಹಿತ್ಯದ ಅಭಿರುಚಿಯೂ ವರವಾಗಿ ಬಂದಿದೆ.

ಸರಕಾರಿ, ರಾಜಕೀಯ ಕ್ಷೇತ್ರದ ಬಳಿಕ ಸಾಹಿತ್ಯ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿದ ಎಂ.ಆರ್. ವಾಸುದೇವ ಅವರ ಚೊಚ್ಚಲ ಕೃತಿಯನ್ನು ಬೆಂಬಲಿಸುವ ಮೂಲಕ ಅವರ ಮುಂದಿನ ಸಾಹಿತ್ಯ ಸೃಷ್ಟಿಗೆ ಪ್ರೇರಣೆಯಾಗುವ ಅಗತ್ಯವಿದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಮಂಗಳೂರು ಆಕಾಶವಾಣಿಯ ವಸಂತ ಕುಮಾರ್ ಪೆರ್ಲ ಅವರು, ಮನಸ್ಸಿನ ಒಳಗಿನಿಂದ ಬರುವ ಚಿಂತನೆಗಳಿಗೆ ಸುಂದರ ರೂಪ ನೀಡಿರುವ ಎಂ. ಆರ್. ವಾಸುದೇವ ಅವರು ತಮ್ಮ ಕೃತಿಯಲ್ಲಿ ಆರ್ಥಿಕ, ಆಧ್ಯಾತ್ಮಿಕ ಹಾಗೂ ತಾತ್ವಿಕವಾದ ಸಂಗ್ರಹಗಳನ್ನು ಹೊಂದಿದ್ದಾರೆ. ಕನಸುಗಾರಿಕೆ ಹಾಗೂ ಕರ್ತೃ ಶಕ್ತಿಯ ಮೂಲಕ ಮೇರು ಸದೃಶವಾದ ಕಾರ್ಯ ಮಾಡಿರುವ ಅವರು ಸಾಂಪ್ರದಾಯಿಕ ರಚನೆ ಹಾಗೂ ಛಂದಸ್ಸುಗಳನ್ನು ಮೀರಿ ಸುಂದರ ಕವನವನ್ನು ರಚಿಸಿದ್ದಾರೆ ಎಂದರು.

ಕವನ ಸಂಕಲನದ ಕರ್ತೃ ಎಂ.ಆರ್. ವಾಸುದೇವ ಮಾತನಾಡಿ, ಸಮಾಜದಲ್ಲಿರುವ ಅಂಕುಡೊಂಕುಗಳನ್ನು ಜನರಿಗೆ ಅರ್ಥಬದ್ಧವಾಗಿ ತಿಳಿಸಬೇಕೆಂದರೆ ನಮ್ಮ ದೃಷ್ಟಿಯನ್ನು ಅರ್ಥ ಮಾಡಿಕೊಳ್ಳುವವರ ಅಗತ್ಯವಿದೆ. ಇಲ್ಲವಾದಲ್ಲಿ ಯಾವುದೇ ವಿಚಾರಗಳು ಮನದಲ್ಲಿ ಮೂಡಿದರೂ ಪರಿಪೂರ್ಣವಾಗಲು ಅಸಾಧ್ಯ.

ಯಾವುದೇ ಕಾರ್ಯಗಳನ್ನು ಮಾಡಬೇಕೆಂದೆನಿಸಿದರೆ ನಾವೇ ಮುಂದಡಿಯಿಟ್ಟು ಪೂರೈಸಿ ದಕ್ಕಿದ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಈ ಕವನ ಸಂಕಲನದ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಪ್ರಯತ್ನ ಮಾಡಿದ್ದೇನೆ ಎಂದರು. ವಿಶ್ರಾಂತ ಪತ್ರಕರ್ತ ಎ. ಈಶ್ವರಯ್ಯ ಅವರು ಕೃತಿ ಪರಿಚಯ ಮಾಡಿದರು.


ವಕೀಲ ಎಂ. ಆರ್. ಸತ್ಯನಾರಾಯಣ, ಬೆಂಗಳೂರು ವಿಸ್ತಾರ್‌ನ ಟ್ರಸ್ಟಿ ಆರ್. ಗೋಪಾಲಕೃಷ್ಣ ಮತ್ತಿತರರು ಭಾಗವಹಿಸಿದ್ದರು. ರವಿಶಂಕರ ಸ್ವಾಗತಿಸಿ, ಸುಧಾಕರ ರಾವ್ ನಿರೂಪಿಸಿದರು.

## ಪೆರ್ಡೂರಿನಲ್ಲಿ ವಿಜಯ ರಥಶಾಂತಿ



ಪೆರ್ಡೂರಿನ ಶ್ರೀ ಭಂಡಿ ಗೋಪಾಲಕೃಷ್ಣರಾಯರು ತಮ್ಮ 97ನೇ ವರ್ಷಾಚರಣೆಯ ಸಂಭ್ರಮದ ಅಂಗವಾಗಿ ನಡೆದ ವಿಜಯ ರಥಶಾಂತಿ ಕಾರ್ಯಕ್ರಮವನ್ನು ಪೆರ್ಡೂರಿನ ತಮ್ಮ ಸ್ವಗೃಹದಲ್ಲಿ ದಿನಾಂಕ 25-05-2015ರಂದು ತಮ್ಮ ಮಕ್ಕಳು ಮತ್ತು ಬಂಧು ಬಾಂಧವರೊಡನೆ ಆಚರಿಸಿದರು. ನೂತನ ಗೃಹ ವನಜ ಲೀಲಾದ ಪ್ರವೇಶೋತ್ಸವದ ಈ ಸಂದರ್ಭದಲ್ಲಿ ಉಡುಪಿಯ ಪುತ್ತಿಗೆ ಮಠಾಧೀಶರಾದ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ಆಗಮಿಸಿ ಶ್ರೀ ಭಂಡಿ ಕುಟುಂಬಸ್ಥರನ್ನು ಹರಸಿದರು

## ಪಡುಬಿದ್ರೆ : ಶ್ರೀ ನೃಸಿಂಹ ಜಯಂತಿ ಕಾರ್ಯಕ್ರಮ



ಪಡುಬಿದ್ರೆ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿಯ ಸನ್ನಿಧಿಯಲ್ಲಿ ಶ್ರೀ ನೃಸಿಂಹ ಜಯಂತಿ ಕಾರ್ಯಕ್ರಮವು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ತಾ. 02-05-2015ನೇ ಶನಿವಾರ ಜರುಗಿತು. ಪೂಜಾ ಕಾರ್ಯಕ್ರಮಗಳು ವಿಧಿವತ್ತಾಗಿ ಜರುಗಿದ ನಂತರ ಮಧ್ಯಾಹ್ನ ಸಾರ್ವಜನಿಕ ಅನ್ನಸಂತರ್ಪಣೆಯು ನಡೆಯಿತು. ರಾತ್ರಿ ಶ್ರೀದೇವರಿಗೆ ರಂಗಪೂಜಾ ಕಾರ್ಯಕ್ರಮವು ಸಂಪನ್ನಗೊಂಡಿತು. ದೇವಾಲಯದ ಆಡಳಿತ ಮಂಡಳಿ ಸದಸ್ಯರು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

## "ಕಿರಿಯರ ಸಾರಥಿ-ಭಗವದ್ಗೀತೆ" ಪುಸ್ತಕ ಬಿಡುಗಡೆ



ತಂತ್ರಾಡಿ ವಿಶ್ವನಾಥ ಶ್ಯಾನುಭೋಗ್ ದಂಪತಿಗಳ ಪುತ್ರ ಸ್ಕಂದನ ಬ್ರಹ್ಮೋಪದೇಶದ ಮುನ್ನಾದಿನ ದಿನಾಂಕ 06-06-2015ರಂದು ಸಂಜೆ ನಡೆದ ಯಕ್ಷಗಾನ ಬಯಲಾಟದ ವೇದಿಕೆಯಲ್ಲಿ ಉಡುಪಿಯ ಸಂಸ್ಕೃತ ಕಾಲೇಜಿನ ಗ್ರಂಥಪಾಲಕರಾದ ನಮ್ಮ ಸಮಾಜದವರಾದ ಶ್ರೀ ಹರಿಕೃಷ್ಣ ರಾವ್ ಅವರು ಬರೆದ ಕಾರ್ತಿಕೇಯಕೃಷ್ಣ ಪ್ರಕಾಶನದಿಂದ ಪ್ರಕಟವಾದ "ಕಿರಿಯರ ಸಾರಥಿ-ಭಗವದ್ಗೀತೆ" ಪುಸ್ತಕವನ್ನು ಬ್ರಹ್ಮೋಪದೇಶದ ವಟು ಚಿ| ಸ್ಕಂದನ ಕೈಯಿಂದ ಬಿಡುಗಡೆಗೊಳಿಸಲಾಯಿತು. ಶ್ರೀ ಹರಿಕೃಷ್ಣ ಅವರು ಕನ್ನಡದಲ್ಲಿ ಅನೇಕ ಪುಸ್ತಕಗಳನ್ನು ಬರೆದಿದ್ದು, ಇವರ "ಉತ್ತಿಷ್ಠ ಪರಂತಪ" ಪುಸ್ತಕವು ಖ್ಯಾತ ಭಾಷಾಂತರಗಾರ ಶ್ರೀ ರಾಮಸ್ವಾಮಿಯವರಿಂದ ಆಂಗ್ಲಭಾಷೆಗೆ ಅನುವಾದಗೊಂಡಿದೆ. ಈಗ ಬಿಡುಗಡೆಗೊಂಡ ಈ ಪುಸ್ತಕವು ಭಗವದ್ಗೀತೆಯ ಸಾರವನ್ನು ಚಿಕ್ಕ ಮಕ್ಕಳಿಗೂ ಅರ್ಥವಾಗುವಂತೆ ತಿಳಿಯಾಗಿ ಕನ್ನಡದಲ್ಲಿ ಬರೆದುದಾಗಿರುತ್ತದೆ.

ಪುಸ್ತಕ ಬಿಡುಗಡೆಯ ಈ ಸಮಾರಂಭದಲ್ಲಿ ಕೃತಿಕಾರ ಶ್ರೀ ಹರಿಕೃಷ್ಣ, ಪುತ್ರ ಶ್ರೀ ಕಾರ್ತಿಕೇಯಕೃಷ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀ ಹರಿಕೃಷ್ಣರ ಧರ್ಮಪತ್ನಿ ಡಾ| ನಿರ್ಮಲಾ ಹರಿಕೃಷ್ಣ (ಉಡುಪಿಯ ವೈಕುಂಠಬಾಳಿಗಾ ಕಾನೂನು ವಿದ್ಯಾಲಯದ ಉಪನ್ಯಾಸಕಿ) ಅವರು ಪುಸ್ತಕದ ಬಗ್ಗೆ ಸಮಗ್ರ ಮಾಹಿತಿ ನೀಡಿ, ಧನ್ಯವಾದ ಸಲ್ಲಿಸಿದರು. ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಕಾರ್ಯಕ್ರಮ ಸಂಯೋಜನೆ ಮಾಡಿದರು.

## ಶುಭ ಜನನ

ಉಡುಪಿ ಅಂಬಲ್ಪಾಡಿಯ ಶ್ರೀಮತಿ ಪ್ರಿಯಾ ಮತ್ತು ವೈ.ದೀಪಕ್ ರಾವ್ (ವೈ.ಮೋಹನ ರಾಯರ ಪುತ್ರ) ದಂಪತಿಗಳಿಗೆ ದಿನಾಂಕ 11-06-2015ರಂದು ಗಂಡು ಶಿಶುವಿನ ಜನನ.

★★★

ಮೂಡುಬೆಳ್ಳೆಯ ಶ್ರೀಮತಿ ದೀಪಿಕಾ ಮತ್ತು ಶ್ರೀ ಚಂದ್ರಕಾಂತ ರಾವ್ ದಂಪತಿಗಳಿಗೆ ದಿನಾಂಕ 18-05-2015ರಂದು ಹೆಣ್ಣು ಶಿಶುವಿನ ಜನನ.

## ಹಾರ್ದಿಕ ಅಭಿನಂದನೆಗಳು



**ಶ್ರೀಮತಿ ವಿಮಲ ಮತ್ತು ಶ್ರೀ ದಾಮೋದರ ರಾವ್**
**"ಶ್ರೀಧಾಮ", ಬ್ರಹ್ಮಸ್ಥಾನದ ಬಳಿ, ಪಡುಬಿದ್ರಿ**
ಇವರಿಗೆ ಅನುಕ್ರಮವಾಗಿ

**'ಭೀಮರಥ ಶಾಂತಿ'**

ಹಾಗೂ

**'ಸಹಸ್ರ ಚಂದ್ರದರ್ಶನ ಶಾಂತಿ'**

ಕಾರ್ಯಕ್ರಮವನ್ನು
ದಿನಾಂಕ 07-06-2015ರಂದು ಸಂಭ್ರಮದಿಂದ ಆಚರಿಸಿದ ಶುಭ ಸಂದರ್ಭದಲ್ಲಿ
ದೇವರು ಆಯುರಾರೋಗ್ಯ ಭಾಗ್ಯವನ್ನು ಕರುಣಿಸಲಿ ಎಂದು ಹಾರೈಸುವ
**ಮಗಳಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಬಂಧುಬಾಂಧವರು**

# ಜಪಾನ್‌ನ ಅವಿಸ್ಮರಣೀಯ ದಿನಗಳು; ಒಂದು ಅವಲೋಕನ

– ಡಾ। ವೈ. ರವೀಂದ್ರನಾಥ ರಾವ್, ಪ್ರಾಂಶುಪಾಲರು, ಬ್ರಹ್ಮಾವರ.

ನನ್ನ ಬದುಕಿನಲ್ಲಿ ಜಪಾನ್ ದೇಶವನ್ನು ನೆನಪಿಸುವ ಕೆಲವು ಘಟನೆಗಳು ನಡೆದು ಹೋಗಿವೆ. ನಾನಾಗ ಪ್ರಾಥಮಿಕ ಶಾಲಾ ವಿದ್ಯಾರ್ಥಿ. ನನ್ನ ತಂದೆಯವರು ಕು। ಪದ್ಮಾ ವಯ್ಯ ಎಂಬ ತನ್ನ ಶಾಲಾ ಹಳೆವಿದ್ಯಾರ್ಥಿನಿಗೆ ಎರಡು ವರ್ಷಗಳಿಂದ ಹಾರ್ಮೋನಿಯಂ ಸಹಿತ ಕರ್ನಾಟಕ ಶಾಸ್ತ್ರೀಯ ಸಂಗೀತ ಪಾಠ ಹೇಳುತ್ತಿದ್ದರು. ಆಕೆಯ ಸಂಗೀತ ವ್ಯಾಸಂಗ ಮುಕ್ತಾಯದ ಹಂತದಲ್ಲಿರುವಾಗ ಒಂದು ದಿನ, ಆಗ ಬಹಳ ಪ್ರಸಿದ್ಧಿ ಹೊಂದಿದ ಹಿಂದಿ ಚಲನಚಿತ್ರದ 'ಸಾಯನಾರೊ.......' ಎಂಬ ಒಂದು ಹಾಡನ್ನೂ ತಂದು ನನ್ನ ತಂದೆಗೆ ನೀಡಿದರು. ಆಕೆ ಅದನ್ನು ಹಾಡಿ, ತನಗೆ ಹಾರ್ಮೋನಿಯಂನಲ್ಲಿ ನುಡಿಸಲು ಅನುಕೂಲವಾಗುವಂತೆ, ನನ್ನ ತಂದೆಯವರಲ್ಲಿ ಅದರ ರಾಗವನ್ನು ಕಂಡುಹುಡುಕಿ ಸ್ವರಗಳನ್ನೂ ಹಾಕಿಕೊಡಬೇಕೆಂದು ಕೇಳಿಕೊಂಡರು. ತಂದೆಯವರು ಆ ಕೂಡಲೇ ಹಾರ್ಮೋನಿಯಂ ಅನ್ನೂ ಜತೆಯಲ್ಲಿರಿಸಿ ರಾಗವನ್ನೂ ಮತ್ತು ಸ್ವರಗಳನ್ನೂ ಗುರುತಿಸಿ ಆಕೆಗೆ ಈ ಹಾಡನ್ನೂ ನುಡಿಸಲು ಕಲಿಸಿದರು. ಎಲ್ಲವನ್ನೂ ಅವಲೋಕಿಸುತ್ತಿದ್ದ ನಾನು ಆಕೆಯ ಪಾಠ ಮುಗಿದ ಬಳಿಕ ಈ ಹಾಡನ್ನು ನುಡಿಸಲು ಕಲಿತೆ. ಆದರೆ ಇದು ಜಪಾನ್ ದೇಶಕ್ಕೆ ಸಂಬಂಧಿಸಿದ 'ಲವ್ ಇನ್ ಟೋಕಿಯೋ' ಎಂಬ ಸಿನೇಮದ್ದು ಮತ್ತು ಹಾಡಿನ ಪ್ರಾರಂಭದ ಎರಡು ಪದಗಳು ಜಪಾನ್ ಭಾಷೆಯದ್ದೆಂದು ನನಗೆ ಬಹಳ ಸಮಯದ ನಂತರ ತಿಳಿಯಿತು.

ಹಾಗೆಯೇ ನನ್ನ ಉಪನ್ಯಾಸ ವೃತ್ತಿಯ ಪ್ರಾರಂಭದ ಕೆಲವು ವರ್ಷಗಳ ಕಾಲ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಸಮಾಜಶಾಸ್ತ್ರದ ಇತರ ಪತ್ರಿಕೆಗಳೊಂದಿಗೆ 'ಸಾಮಾಜಿಕ ಜನಸಂಖ್ಯಾಶಾಸ್ತ್ರ' ಎಂಬ ಒಂದು ಪತ್ರಿಕೆಯನ್ನು ಬೋಧಿಸುತ್ತಿದ್ದೆ. ಆ ಪತ್ರಿಕೆಯಲ್ಲಿನ "ವಿಶ್ವಜನಸಂಖ್ಯೆ" ಎಂಬ ಒಂದು ಅಧ್ಯಾಯದಲ್ಲಿ ಜಪಾನ್ ದೇಶದ ಜನಸಂಖ್ಯಾ ರಚನೆ-ಲಕ್ಷಣಗಳನ್ನೂ ಬೋಧಿಸಬೇಕಾಗಿತ್ತು. ಹಾಗೆಯೇ ಜಪಾನ್ ದೇಶಕ್ಕೆ ಸಂಬಂಧಿಸಿ, ನಾನು ಹೆಚ್ಚಿನ ಪುಸ್ತಕಗಳನ್ನು ಓದಬೇಕಿತ್ತು. ಮುಂದೆ, 2006ರಲ್ಲಿ ನಾನು ನನ್ನ ಸಂಶೋಧನಾ ಪ್ರಬಂಧದ ಮಂಡನೆಗಾಗಿ ದಕ್ಷಿಣ ಆಫ್ರಿಕಾದ ಡರ್ಬನ್‌ನಲ್ಲಿ ಕೆಲಕಾಲ ಇದ್ದಾಗ, ಜಪಾನ್‌ನಿಂದ ಬಂದ ಅಲ್ಲಿನ ರ್ಯುಸ್ತು ಕಿರ್ಯೂ ವಿಶ್ವವಿದ್ಯಾನಿಲಯದ ಒಬ್ಬ ಸಮಾಜಶಾಸ್ತ್ರ ಪ್ರಾಧ್ಯಾಪಕರಾದ ಡಾ।ಮೊರಿಯೋ ಓಂದಾ ಎಂಬವರು ನನ್ನ ಬಹಳ ಆತ್ಮೀಯ ಮಿತ್ರರಾದರು. ನಮ್ಮ ಮಿತ್ರತ್ವ ಹಾಗೆಯೇ ಅನೇಕ ವರ್ಷಗಳಲ್ಲಿ ಮುಂದುವರಿಯುತ್ತಾ ಹೋಯಿತು. ಹೀಗೆಯೇ ಜಪಾನ್ ದೇಶಕ್ಕೆ ಸಂಬಂಧಿಸಿ ಈ ಎಲ್ಲಾ ಘಟನೆಗಳು ನಡೆಯುತ್ತಿದ್ದಾಗೆಲ್ಲಾ, ನಾನು ಮುಂದೊಂದು ದಿನ ಜಪಾನ್ ದೇಶಕ್ಕೆ ಹೋಗುತ್ತೇನೆಂದು ಎಂದೂ ಎಣಿಸಿರಲಿಲ್ಲ, ಅಥವಾ ಇದು ನನ್ನ ಯೋಚನೆಗೂ ಬರಲಿಲ್ಲ.

ಆದರೆ, ನಾನು ಕಳೆದ ವರ್ಷ ಜುಲೈ ತಿಂಗಳಲ್ಲಿ 9 ದಿವಸಗಳ ಕಾಲ ಅಂತಾರಾಷ್ಟ್ರೀಯ ಸಮಾಜಶಾಸ್ತ್ರ ಸಮ್ಮೇಳನದಲ್ಲಿ ಪ್ರಬಂಧ ಮಂಡನೆ ಮತ್ತು ಅಲ್ಲಿನ ಗೋಷ್ಠಿಯೊಂದರ ಅಧ್ಯಕ್ಷನಾಗಿ ಭಾಗವಹಿಸಲು ಜಪಾನ್ ದೇಶದ ಯಕೊಹಾಮಾದಲ್ಲಿರುವ ಅವಕಾಶ ಸಿಕ್ಕಾಗ, ನನ್ನ ಬದುಕಿನಲ್ಲಿ ನಡೆದ ಈ ಮೇಲಿನ ಎಲ್ಲಾ ಘಟನೆಗಳು ಅನುಭವಗಳು ನಾನು ಅಲ್ಲಿರುವಾಗ ಬಹಳ ಅನುಕೂಲವಾಯಿತು, ಮತ್ತು ಜಪಾನಿ ಸ್ನೇಹಿತನ ಸಂಪರ್ಕವು ನನ್ನ ಜಪಾನಿನ ಕಿರು ಅವಧಿಯ ವಾಸ್ತವ್ಯಕ್ಕೆ ಒಂದು ವರದಾನವಾಯಿತು.


ಜಪಾನ್ ಏಷ್ಯಾ ಖಂಡದ ಪೂರ್ವಭಾಗದಲ್ಲಿರುವ ಒಂದು ಅತ್ಯಂತ ಮುಂದುವರಿದ ದೇಶವಾಗಿದೆ. ಹಿರೋಶಿಮಾ ಮತ್ತು ನಾಗಾಸಕಿ ಘಟನೆಗಳ ಬಳಿಕ ನಮ್ಮ ದೇಶಕ್ಕಿಂತಲೂ ಒಂದು ಕಾಲದಲ್ಲಿ ಹಿಂದುಳಿದಿದ್ದ ಜಪಾನ್ ನಂತರದ ವರ್ಷಗಳಲ್ಲಿ ಪ್ರಪಂಚದಲ್ಲೇ ಒಂದು ಬಲಿಷ್ಠ ರಾಷ್ಟ್ರವಾಗಿ ಮೂಡಿಬಂದಿರುವುದು ಜಪಾನಿಯರ ಒಂದು ದೊಡ್ಡ ಸಾಧನೆ. ಜಪಾನ್ ಸುಮಾರು 6,800 ದ್ವೀಪಗಳಿಂದ ಕೂಡಿದ ಒಂದು ಸುಂದರ ದೇಶವಾಗಿದೆ. ಇದರ ಸುತ್ತ ಫೆಸಿಫಿಕ್ ಮಹಾಸಾಗರವಿದೆ. ಟೋಕಿಯೋ ಇದರ ರಾಜಧಾನಿ ಈ ನಗರವು ಹಾಂಶು ಎಂಬ ದ್ವೀಪದ ಮಧ್ಯಭಾಗದಲ್ಲಿದೆ. ಇದರ ನೈರುತ್ಯ ಭಾಗದಲ್ಲಿ 30.ಕಿ.ಮೀ (18 ಮೈಲುಗಳು) ದೂರದಲ್ಲಿ ಯಾಕೊಹಾಮ ನಗರವಿದೆ. ಇದೊಂದು ಜಪಾನಿನ ಪ್ರಮುಖ ಬಂದರು ನಗರವಾಗಿದೆ. ಇಲ್ಲಿನ ಹವಾಮಾನ ಸರಾಸರಿ 16.5ಸಿ ಇದ್ದು ಅತ್ಯಂತ ಹೆಚ್ಚೆಂದರೆ 20.5ಸಿ ಮತ್ತು ಕಡಿಮೆ ಎಂದರೆ 13.3ಸಿ ಉಷ್ಣಾಂಶ ಇರುತ್ತದೆ. ಇದು ಸಾಧಾರಣ ಮಟ್ಟಿಗೆ ನ್ಯೂಯಾರ್ಕ್ ನಗರದ ಹವಾಮಾನಕ್ಕೆ ಸಮಾನವಾಗಿದೆ. ಯಾಕೂಹಾಮಾ ಅನೇಕ ಆಕರ್ಷಣೀಯಗಳೊಂದಿಗೆ ಒಂದು ವರ್ಣಮಯ ನಗರವಾಗಿ ಜಪಾನ್‌ನಲ್ಲಿ ಪ್ರಸಿದ್ಧವಾಗಿದೆ. ಜಗತ್ತಿನ ಯಾವುದಾದರೊಂದು ದೇಶದಲ್ಲಿ ನಾಲ್ಕು ವರ್ಷಕ್ಕೊಮ್ಮೆ ನಡೆಯುವ ಈ ಅಂತಾರಾಷ್ಟ್ರೀಯ ಮಟ್ಟದ ಸಮ್ಮೇಳನದ ಸ್ಥಳೀಯ ಸಂಘಟನಾ ಸಮಿತಿಯಲ್ಲಿ ಜಪಾನ್ ದೇಶದ ಒಟ್ಟು 17 ವಿವಿಧ ವಿಶ್ವವಿದ್ಯಾನಿಲಯಗಳ ಒಟ್ಟು 19 ಸದಸ್ಯರಿದ್ದರು. ಸಮಾಜಶಾಸ್ತ್ರಜ್ಞ, ಜಪಾನಿನ ತೊಹೂಕೂ ವಿಶ್ವವಿದ್ಯಾನಿಲಯದ ಪ್ರೊ। ಕ್ಯೊಚಿ ಹೆಸೆಗಾವ ಅವರು ಇದರ ಅಧ್ಯಕ್ಷರಾಗಿದ್ದಾರೆ.




ನನ್ನ ಜಪಾನ್ ಪ್ರಯಾಣವು ಜುಲೈ 11ರಂದು ñ ಆ್ಯರ್ ಇಂಡಿಯಾ ವಿಮಾನದ ಮೂಲಕ ಮಂಗಳೂರು ವಿಮಾನ ನಿಲ್ದಾಣದಿಂದ ಬೆಂಗಳೂರಿಗೆ, ಮತ್ತು ಅಲ್ಲಿಂದ 12ನೇ ತಾರೀಕು ಮಲೇಶ್ಯನ್ ಆ್ಯರ್‌ಲೈನ್ಸ್ ಮೂಲಕ ಮಲೇಶ್ಯಾದ ರಾಜಧಾನಿ ಕೌಲಾಲಾಂಪುರಕ್ಕೆ ಹೋಗಿ ಅಲ್ಲಿ ಜಪಾನ್ ವಿಮಾನಕ್ಕಾಗಿ ಇನ್ನೊಂದು ಟರ್ಮಿನಲ್‌ಗಾಗಿ ಸ್ವಯಂಚಾಲಿತ ಆ್ಯರೋಟ್ರೈನ್ ಮೂಲಕ ಹೋಗ ಬೇಕಾಯಿತು. ಸ್ವಯಂಚಾಲಿತ ಆ್ಯರೋಟ್ರೈನ್ 2-3 ನಿಮಿಷಗಳಿಗೊಮ್ಮೆ ನಿರಂತರವಾಗಿ ಪ್ರಯಾಣಿಕರನ್ನು ದಾಟಿಸಲು ಎರಡೂ ಟರ್ಮಿನಲ್‌ಗಳ ಮಧ್ಯೆ ಚಲಿಸುತ್ತಿರುತ್ತದೆ. ಕೌಲಾಲಾಂಪುರದಿಂದ ರಾತ್ರಿ 11.30ಕ್ಕೆ ಮಲೇಶ್ಯನ್ ಆ್ಯರೋಟ್ರೈನ್ ಮೂಲಕ ಮರುದಿವಸ ತಾ.13 ರಂದು ಬೆಳಗ್ಗೆ 7.45ಕ್ಕೆ ಟೋಕಿಯೋ ನಗರದ ನರಿತಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ತಲುಪಿದೆನು. ಟೋಕಿಯೋದಲ್ಲಿರುವ ಇನ್ನೊಂದು ಅಂತರಾಷ್ಟ್ರೀಯ ವಿಮಾನ ನಿಲ್ದಾಣ 'ಹನಿದಾ' ಎಂಬುದುದಾಗಿದೆ. ಬಳಿಕ ವಿಮಾನ ನಿಲ್ದಾಣದಿಂದ ವಿವಿಧ ಪ್ರದೇಶಗಳಿಗೆ ಹೊರಡುವ ಲೈಮೋಸಿನ್ ಬಸ್ಸಿನ ಮೂಲಕ ವೈಕ್ಯಾಟ್ (ಯಕೊಹಾಮಾ ಸಿಟಿ ಆ್ಯರ್ ಟರ್ಮಿನಲ್)ಗೆ ಸುಮಾರು ಒಂದು ಗಂಟೆ ಪ್ರಯಾಣವಿದೆ. ಮತ್ತೆ ಅಲ್ಲಿಂದ ಟ್ಯಾಕ್ಸಿಯಲ್ಲಿ ನನ್ನ ಹೋಟೇಲ್‌ಗೆ ಸುಮಾರು ಅರ್ಧ ಗಂಟೆ ದಾರಿ ಇತ್ತು.

ನಾನು ಉಳಕೊಂಡ 'ರೂಟ್‌ಇನ್' ಎನ್ನುವ ಹೆಸರಿನ ಹೋಟೇಲ್ ಯಕೊಹಾಮಾ ನಗರದ 'ಕನ್ನೈ' ಎಂದು ಕರೆಯುವ ಪ್ರದೇಶಕ್ಕೆ ಸೇರಿದ್ದು, ಅದರಲ್ಲಿ 'ಬಶಾಮಿಚ' ಎಂಬ ಸ್ಥಳದಲ್ಲಿದೆ, ಇದು ತ್ರಿಸ್ಟಾರ್ ಹೋಟೇಲ್ ಆಗಿದ್ದು, ಇದರ ಸುತ್ತಮುತ್ತ ಅನೇಕ ಪ್ರೇಕ್ಷಣೀಯ ಸ್ಥಳಗಳಾದ ರೆಡ್‌ಬ್ರಿಕ್ ವ್ಯಾರ್‌ಹೌಸ್, ಯಕೊಹಾಮಾ ಕಾಸ್ಮೋ ವರ್ಲ್ಡ್, ಜಪಾನ್ ದೇಶದಲ್ಲೇ ಎರಡನೇಯ ಅತ್ಯಂತ ಎತ್ತರದ 73 ಮಹಡಿಯ 'ಲ್ಯಾಂಟ್‌ಮಾರ್ಕ್ ಟವರ್' ಎಂಬ ಕಟ್ಟಡ, ಯಕೊಹಾಮಾ ಮ್ಯೂಸಿಯಂ ಆಫ್ ಆರ್ಟ್ ಯಕೊಹಾಮಾ ಪಾರ್ಕ್ ಇವೆ. ನನ್ನ ಹೋಟೇಲ್‌ನ ಎದುರೇ 'ಮ್ಯೂಸಿಯಂ ಆಫ್ ಆರ್ಟ್, ಯಕೊಹಾಮಾ ಪಾರ್ಕ್ ಇವೆ. ನನ್ನ ಹೋಟೇಲ್‌ನ ಎದುರೇ 'ಮ್ಯೂಸಿಯಂ ಆಫ್ ಕಲ್ಚರಲ್ ಹೆಸ್ಟ್ರಿ' ಎಂಬ ವಸ್ತುಸಂಗ್ರಾಹಾಲಯವೂ ಇತ್ತು.

ನಾನಿದ್ದ ಹೋಟೇಲ್‌ನ ಕೊಠಡಿ ಒಬ್ಬರು ಇರಬಹುದಾದ ಸಣ್ಣ ಕೊಠಡಿಯಾಗಿದ್ದರೂ ಅದರೊಳಗೆ ಬಹಳ ಅಚ್ಚುಕಟ್ಟಾಗಿ ಅಗತ್ಯ ಸೌಲಭ್ಯಗಳನ್ನೂ ನೀಡಲು ವಿನ್ಯಾಸ ಗೊಳಿಸಿರುವ ಈ ಕೊಠಡಿಯನ್ನು ನೋಡಿದರೆ ಜಪಾನಿಯರ ಜಾಣತನವನ್ನು ತಿಳಿದುಕೊಳ್ಳಬಹುದು. ಈ ಕೊಠಡಿಯೊಳಗೆ ವಾರ್ಡೂಬ್,ಫ್ರಿಜ್, ಟೀಮೇಕರ್, ಸಾಕಷ್ಟು ಡ್ರಾವರ್‌ಗಳಿರುವ, ವಾಶ್ ಏರಿಯಾ, ಟಬ್‌ಬಾತ್ ಇವೆಲ್ಲವೂ ಇತ್ತು. ಹಾಗೆಯೇ ಕಂಡೀಶನರ್, ರ್ಯಾಂಪು ಮತ್ತು ಆಕ್ಸಿಡ್‌ಬಾತ್ ಸೋಪ್ ಸಾಕಷ್ಟು ಪೂರೈಸುತ್ತಿದ್ದರು. ಎರಡು ದಿವಸಕ್ಕೊಮ್ಮೆ ಇನ್‌ಡೋರ್ ಚಪ್ಪಲ್, ಬಾತ್‌ಟವರ್‌ಗಳು, ಶೇವಿಂಗ್ ಸೆಟ್, ಟೂತ್ ಬ್ರಷ್ ಇತ್ಯಾದಿಗಳನ್ನು ಬದಲಾಯಿಸಿ ದಿನದ ಅಗತ್ಯತೆಗಳನ್ನು ಪೂರೈಸುತ್ತಿದ್ದರು. ಏಸಿಯ ಸ್ವಿಚ್ ಅತೀ ಚಿಕ್ಕದಾಗಿದ್ದು ಅದು ಹವಾಮಾನ ತೋರಿಸುವ ಇನ್ನೊಂದು ಚಿಕ್ಕಗೇಜ್ ಜೊತೆ ಇದ್ದುದರಿಂದ ನನಗೆ ಏಸಿ ಸ್ವಿಚ್ ಹುಡುಕಲು ಸ್ವಲ್ಪ ಕಾಲಾವಕಾಶ ಬೇಕಾಯಿತು. ಹೋಟೇಲ್‌ನಲ್ಲಿ ಉಚಿತ ಇಂಟರ್‌ನೆಟ್ ಮತ್ತು ಬೆಳಗ್ಗಿನ ಉಪಾಹಾರ ವ್ಯವಸ್ಥೆಯನ್ನು ಒದಗಿಸಿದ್ದರು. ಉಪಾಹಾರದಲ್ಲಿ ವಿವಿಧ ಬಗೆಗಳ ಬ್ರೆಡ್‌ಗಳು, ಅನ್ನ ಮೊಸರು, ತರಕಾರಿಗಳು, ಸೊಪ್ಪುಗಳು, ಹಣ್ಣಿನರಸ, ಹಣ್ಣಿನ ಸಲಾಡ್, ಚಹಾ, ಜಪಾನಿ ತಿನಸುಗಳನ್ನು ನೀಡುತ್ತಿದ್ದರು. (ಮುಂದುವರಿಯುವುದು...)



# ಶ್ರೀ ಶಾರದಾ ಮಂಟಪದಲ್ಲಿ ಯಕ್ಷಗಾನ ಪ್ರದರ್ಶನ



ಸನ್ಮಾನ ಸ್ವೀಕರಿಸುತ್ತಿರುವ ಶ್ರೀ ದೇವದಾಸ್ ಕೂಡ್ಲಿ ಬಾರ್ಕೂರು

ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ದಿನಾಂಕ 07–06–2015ರಂದು ತಂತ್ರಾಡಿ ವಿಶ್ವನಾಥ ಶ್ಯಾನುಭೋಗ್ ಹಾಗೂ ಶ್ರೀಮತಿ ರಶ್ಮಿ ಶ್ಯಾನುಭೋಗ್ ದಂಪತಿಗಳ ಪುತ್ರ ಚಿ। ಸ್ಕಂದನ ಬ್ರಹ್ಮೋಪದೇಶದ ಪ್ರಯುಕ್ತ ಮುನ್ನಾದಿನ ಅಂದರೆ ದಿನಾಂಕ 06–06–2015ರಂದು ಸಂಜೆ ಉಡುಪಿಯ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರಿಂದ ‘ಶಿವ ಪಂಚಾಕ್ಷರೀ ಮಹಿಮೆ’ ಯಕ್ಷಗಾನ ಬಯಲಾಟವು ಪ್ರದರ್ಶನಗೊಂಡಿತು.

ಯಕ್ಷಗಾನ ಸಭಾಲಕ್ಷಣಗಳು ಮುಗಿದ ನಂತರ ನಮ್ಮ ಸಮಾಜದ ಇಬ್ಬರು ಖ್ಯಾತ ಕಲಾವಿದರಿಗೆ ದಿ। ಕೃಷ್ಣಮೂರ್ತಿ ಶ್ಯಾನುಭೋಗ್ ಇವರ ನೆನಪಿಗೆ ‘ಗುರು ವಂದನಾ’ ಗೌರವ ಸನ್ಮಾನವು ನೆರವೇರಿತು. ಮೊದಲಿಗೆ ಯಕ್ಷಗಾನ ಗುರುಗಳೂ, ಹಿಮ್ಮೇಳವಾದಕರೂ, ಅನೇಕ ಸಂಘ ಸಂಸ್ಥೆಗಳಿಗೆ ಯಕ್ಷಗಾನ ಗುರುಗಳಾಗಿ ಯಕ್ಷಗಾನ ನೃತ್ಯ ಕಲಿಕೆಯ ತರಗತಿಯನ್ನು


ದೇವಾನಂದ್ ಭಟ್ ಬೆಳುವಾಯಿ ಇವರಿಗೆ ಸನ್ಮಾನ

ನಡೆಸುವವರೂ, ಬಡಗುತಿಟ್ಟಿನ ಯಕ್ಷಗಾನ ಕಲೆಯಬಗ್ಗೆ ಅಧಿಕಾರಯುಕ್ತವಾಗಿ ಮಾತನಾಡಬಲ್ಲ ಓರ್ವ ಸಮರ್ಥ ಕಲಾವಿದರಾದ ಶ್ರೀ ದೇವದಾಸ ಕೂಡ್ಲಿಯವರನ್ನೂ, ನಂತರ ತೆಂಕುತಿಟ್ಟಿನ ಯಕ್ಷಗಾನ ಕಲಾವಿದರೂ, ಹಿಮ್ಮೇಳ ಮುಮ್ಮೇಳಗಳಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಿದವರೂ ಅಲ್ಲದೆ ವೃತ್ತಿಯಲ್ಲಿ ಛಾಯಾಚಿತ್ರಗಾರರೂ, ವೀಡಿಯೋಗ್ರಾಫರ್‌ರಾಗಿ ಬೇರೆ ಬೇರೆ ಸ್ಥಳಗಳಲ್ಲಿ ಸ್ಟುಡಿಯೋಗಳನ್ನು ಮುನ್ನಡೆಸಿ, ಅನೇಕ ಯುವ ಜನಾಂಗಕ್ಕೆ ಬದುಕುವ ದಾರಿಯನ್ನು ತೋರಿಸಿಕೊಟ್ಟ ಶ್ರೀ ದೇವಾನಂದಭಟ್ ಬೆಳುವಾಯಿ ಈ ಇಬ್ಬರು ಉನ್ನತ ಕಲಾವಿದರನ್ನು ಶಾಲು, ಹಾರ, ಹೂ, ಹಣ್ಣು ಹಂಪಲು, ಸ್ಮರಣಿಕೆ ನೀಡಿ ಶ್ರೀ ವಿಶ್ವನಾಥ್ ಶ್ಯಾನುಭೋಗ್‌ರ ದೊಡ್ಡಪ್ಪ ಶ್ರೀ ರಂಗರಾವ್ ಶ್ಯಾನುಭೋಗ್ ಮತ್ತು ಸಹೋದರರು ಜೊತೆಯಾಗಿ ಸನ್ಮಾನಿಸಿದರು.

ಬಳಿಕ ನಡೆದ ಯಕ್ಷಗಾನ ಬಯಲಾಟ ಅದ್ಭುತವಾಗಿ ಪ್ರದರ್ಶನಗೊಂಡು ಆಗಮಿಸಿದ್ದ ಪ್ರೇಕ್ಷಕರಿಂದ ಪ್ರಶಂಸಿಸಲ್ಪಟ್ಟಿತು.



ಯಕ್ಷಗಾನ ಪ್ರಸಂಗ "ಶಿವಪಂಚಾಕ್ಷರಿ ಮಹಿಮೆ" ಪ್ರದರ್ಶನ

## ಭೀಮರಥ ಶಾಂತಿ ಹಾಗೂ ವಿಜಯ ರಥಶಾಂತಿ

ಉಡುಪಿ ಅಜ್ಜರಕಾಡಿನಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ಲಲಿತಾ ಮತ್ತು ಶ್ರೀ ಮುಂಡ್ಕೂರು ಪಾಲಚಂದ್ರರಾವ್ ಇವರು ಅನುಕ್ರಮವಾಗಿ ಭೀಮರಥ ಶಾಂತಿ ಹಾಗೂ ವಿಜಯ ರಥಶಾಂತಿ ಕಾರ್ಯಕ್ರಮವನ್ನು ದಿನಾಂಕ 19–05–2015ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವರ ಸನ್ನಿಧಾನದಲ್ಲಿ ತಮ್ಮ ಮಕ್ಕಳು ಮತ್ತು ಬಂಧು ಬಾಂಧವರೊಡನೆ ಆಚರಿಸಿದರು.

# ಬ್ರಹ್ಮೋಪದೇಶ

### ಚಿ। ಯಶ್

ಮುಂಬೈಯ ಭಾಂಡುಪ್‌ನಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ಪಲ್ಲವಿ ಮತ್ತು ಶ್ರೀ ವಿಜಯಾನಂದ್ ಎಮ್.ಆರೂರು ಇವರ ಪುತ್ರ ಯಶ್‌ನ ಬ್ರಹ್ಮೋಪದೇಶವು ದಿನಾಂಕ 20–05–2015ರಂದು ನವಿ ಮುಂಬೈನ ನೆರುಲ್‌ನ ಆಶ್ರಯ ಹಾಲ್‌ನಲ್ಲಿ ನೆರವೇರಿತು.

### ಚಿ। ಸೃಜನ್‌ಕುಮಾರ

ನಂದಳಿಕೆ ಬಡಗುಮನೆ ಶ್ರೀಮತಿ ನಳಿನಾಕ್ಷಿ ಮತ್ತು ಶ್ರೀ ಶಿವರಾಮರಾವ್‌ರ ಪುತ್ರ ಸೃಜನ್‌ಕುಮಾರನ ಬ್ರಹ್ಮೋಪದೇಶವು 20–05–2015ರಂದು ನಂದಳಿಕೆಯ ಸ್ವಗೃಹ ಬಡಗುಮನೆಯಲ್ಲಿ ನೆರವೇರಿತು.

### ಚಿ। ರಾಜೀವ

ಮಂಗಳೂರು ಕುಡುಪು ಶ್ರೀಮತಿ ರಮ್ಯಾ ಮತ್ತು ಶ್ರೀ ಕೆ ರಾಧೇಶ್ಯಾಂ ರಾವ್‌ರ ಪುತ್ರ ರಾಜೀವನ ಬ್ರಹ್ಮೋಪದೇಶವು 22–05–2015 ರಂದು ಮಂಗಳೂರು ಬಿಜೈಯ ಶ್ರೀ ಸುಬ್ರಹ್ಮಣ್ಯ ಸಭಾ ಭವನದಲ್ಲಿ ನೆರವೇರಿತು.

### ಚಿ। ಈಕ್ಷಣ್ ಕುಮಾರ್

ಮಹಾರಾಷ್ಟ್ರದ ಸತಾರದಲ್ಲಿರುವ ಶ್ರೀಮತಿ ಕವಿತಾ ಮತ್ತು ಶ್ರೀ ಸಂಕೇತ್ ಶಾನುಭಾಗ್ ಇವರ ಪುತ್ರ ಈಕ್ಷಣ್ ಕುಮಾರ್‌ನ ಬ್ರಹ್ಮೋಪದೇಶವು ದಿನಾಂಕ 29–05–2015 ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

### ಚಿ। ವಿವಾನ್ ಕುಮಾರ್

ಮಹಾರಾಷ್ಟ್ರದ ಸತಾರದಲ್ಲಿರುವ ಶ್ರೀಮತಿ ಲತಿಕಾ ಮತ್ತು ಶ್ರೀ ವೈಶಾಖ್ ಶಾನುಭಾಗ್ ಇವರ ಪುತ್ರ ವಿವಾನ್ ಕುಮಾರ್‌ನ ಬ್ರಹ್ಮೋಪದೇಶವು ದಿನಾಂಕ 29–05–2015 ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

### ಚಿ। ಅವನೀಶ್

ಮಂಗಳೂರು ಶಿರ್ತಾಡಿಯ ಶ್ರೀಮತಿ ರಶ್ಮಿ ಮತ್ತು ಶ್ರೀ ಯೋಗೀಶ್ ರಾವ್ ಇವರ ಪುತ್ರ ಅವನೀಶ್‌ನ ಬ್ರಹ್ಮೋಪದೇಶವು ದಿನಾಂಕ 28–05–2015ರಂದು ಶಿರ್ತಾಡಿ ಪಡುಂಬೋಡಿಯ ‘ಶಿವಶಂಕರಿ ನಿಲಯ’ದಲ್ಲಿ ನೆರವೇರಿತು.

### ಚಿ। ಅದ್ವೈತ

ಉಡುಪಿ ಬೈಲಕೆರೆಯ ಶ್ರೀಮತಿ ಪ್ರಿಯಾ ಮತ್ತು ಶ್ರೀ ಅಶ್ವಿನಿ ಕುಮಾರ್ ಜೆ ಇವರ ಪುತ್ರ ಅದ್ವೈತನ ಬ್ರಹ್ಮೋಪದೇಶವು ದಿನಾಂಕ 28–05–2015ರಂದು ಉಡುಪಿ ಚಿಟ್ಪಾಡಿ ಸರಸ್ವತೀ ಸಭಾ ಭವನದಲ್ಲಿ ನೆರವೇರಿತು.

### ಚಿ। ಸ್ವರೂಪ

ಕಬ್ಬಿನಾಲೆ ಕೆಳಕೆಮ್ಮೋಳಿ ಶ್ರೀಮತಿ ಸಂಧ್ಯಾ ಮತ್ತು ಶ್ರೀ ಉಮೇಶ್ ಹೆಬ್ಬಾರರ ಪುತ್ರ ಸ್ವರೂಪನ ಬ್ರಹ್ಮೋಪದೇಶವು ದಿನಾಂಕ 28–05–2015ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

### ಚಿ। ಸ್ಕಂದ

ಉಡುಪಿ ಇಂದ್ರಾಳಿಯ ವಿ.ಪಿ. ನಗರದಲ್ಲಿರುವ ಶ್ರೀಮತಿ ರಶ್ಮಿ ಮತ್ತು ಶ್ರೀ ತಂತ್ರಾಡಿ ವಿಶ್ವನಾಥ ಶಾನುಭೋಗ್‌ರ ಪುತ್ರ ಸ್ಕಂದನ ಬ್ರಹ್ಮೋಪದೇಶವು ದಿನಾಂಕ 07–06–2015ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

### ಚಿ। ಸಮ್ಯಕ್

ಹಿರಿಯಡಕ ಆಳುಗ್ಗೇಲು ಶ್ರೀಮತಿ ವಿನಯ ಮತ್ತು ಶ್ರೀ ಶಿವಾನಂದ ಇವರ ಪುತ್ರ ಸಮ್ಯಕ್‌ನ ಬ್ರಹ್ಮೋಪದೇಶವು ದಿನಾಂಕ 07–06–2015 ರಂದು ಆಳುಗ್ಗೇಲಿನ ಸ್ವಗೃಹ ‘ಶಾಸ್ತ್ರಿ ಸದನ’ದಲ್ಲಿ ನೆರವೇರಿತು.

### ಚಿ। ಪ್ರಣವ್

ಶ್ರೀಮತಿ ಸೀಮಾ ಮತ್ತು ಶ್ರೀ ಜಯಂತರಾಜ ಇವರ ಪುತ್ರ ಪ್ರಣವ್‌ನ ಬ್ರಹ್ಮೋಪದೇಶವು ದಿನಾಂಕ 20–05–2015 ರಂದು ಮಂಗಳೂರು ಬಿಜೈಯ ಶ್ರೀ ಸುಬ್ರಹ್ಮಣ್ಯ ಸಭಾ ಭವನದಲ್ಲಿ ನೆರವೇರಿತು.

### ಚಿ। ಆತ್ಮೀಯ ಕೃಷ್ಣ

ಕಾಸರಗೋಡು ಕಲ್ಲಕಟ್ಟದ ನಿವಾಸಿ ಶ್ರೀಮತಿ ಪ್ರಸನ್ನ ಕುಮಾರಿ ಮತ್ತು ಅದ್ಯಪಾಡಿ ಶ್ರೀ ಕುಮಾರಸ್ವಾಮಿಯವರ ಪುತ್ರ ಆತ್ಮೀಯ ಕೃಷ್ಣನ ಬ್ರಹ್ಮೋಪದೇಶವು ದಿನಾಂಕ 11–06–2015ರಂದು ಕಾಸರಗೋಡು ಅರಂಗೋಡಿನ ಶ್ರೀ ಶಾರದಾಂಬಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

### ಚಿ। ಜ್ಞಾನೇಶ

ಉಬರಳೆ ಶ್ರೀ ಜನಾರ್ದನ (ಅನಂತ) ಹಾಗೂ ಶ್ರೀಮತಿ ಪ್ರತಿಮಾ ಇವರ ಪುತ್ರ ಜ್ಞಾನೇಶನ ಬ್ರಹ್ಮೋಪದೇಶವು ದಿನಾಂಕ 22–05–2015ರಂದು ಪೊಳಲಿ ಶ್ರೀ ರಾಜರಾಜೇಶ್ವರೀ ಕ್ಷೇತ್ರದಲ್ಲಿ ನೆರವೇರಿತು.

### ಕು। ಅಸೀಮಾ ಅಗ್ನಿಹೋತ್ರಿ
### ಚಿ। ಅದ್ವೈತ್

ಅಡೂರು ಚರಕಂಡ ಶ್ರೀಮತಿ ಮತ್ತು ಶ್ರೀ ಸತ್ಯನಾರಾಯಣ ಇವರ ಮಕ್ಕಳಾದ ಕು। ಅಸೀಮಾ ಅಗ್ನಿಹೋತ್ರಿ ಮತ್ತು ಅದ್ವೈತ್ ಅಗ್ನಿಹೋತ್ರಿ ಇವರ ಬ್ರಹ್ಮೋಪದೇಶವು ದಿನಾಂಕ 22–05–2015ರಂದು ಅಡೂರು ಶ್ರೀ ಮಹಾಲಿಂಗೇಶ್ವರ ಕ್ಷೇತ್ರದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ಸಹಸ್ರ ಚಂದ್ರದರ್ಶನ ಶಾಂತಿ –ಶ್ರೀ ಶಂಕರ ನಾರಾಯಣ ಹೆಬ್ಬಾರ್, ಮರೂರು

ಮರೂರು ಶ್ರೀ ಶಂಕರ ನಾರಾಯಣ ಹೆಬ್ಬಾರರು ತಮ್ಮ ಸಹಸ್ರ ಚಂದ್ರದರ್ಶನ ಶಾಂತಿ ಕಾರ್ಯಕ್ರಮವನ್ನು ಬೆಳ್ವೆ ಮರೂರಿನ ಸ್ವಗೃಹದಲ್ಲಿ ದಿನಾಂಕ 03–05–2015ರಂದು ತಮ್ಮ ಮಕ್ಕಳು ಮತ್ತು ಬಂಧು ಬಾಂಧವರೊಡನೆ ಆಚರಿಸಿದರು.

## ಸಹಸ್ರ ಚಂದ್ರದರ್ಶನ ಶಾಂತಿ – ಶ್ರೀ ದಿವಾಕರ ಶಾಸ್ತ್ರಿ ಆಳುಗ್ಗೇಲು

ಹಿರಿಯಡಕ ಆಳುಗ್ಗೇಲು ಶ್ರೀ ದಿವಾಕರ ಶಾಸ್ತ್ರಿಯವರು ತಮ್ಮ ಸಹಸ್ರ ಚಂದ್ರದರ್ಶನ ಶಾಂತಿ ಕಾರ್ಯಕ್ರಮವನ್ನು ಆಳುಗ್ಗೇಲಿನ ಸ್ವಗೃಹ ‘ಶಾಸ್ತ್ರಿ ಸದನ’ದಲ್ಲಿ ದಿನಾಂಕ 07–06–2015ರಂದು ತಮ್ಮ ಮಕ್ಕಳು ಮತ್ತು ಬಂಧು ಬಾಂಧವರೊಡನೆ ಆಚರಿಸಿದರು.


RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

# ನಮ್ಮ ಶಾರದಾ ಮಂಟಪ....

...1ನೇ ಪುಟದಿಂದ

ವರ್ಷಗಳ ಹಿಂದೆ ನಿರ್ಮಾಣಮಾಡಲಾದ ಈ ಶೌಚಾಲಯಗಳ ಬಗ್ಗೆ ಹಲವಾರು ಗ್ರಾಹಕರಿಂದ ದೂರುಗಳು ಬಂದ ಹಿನ್ನಲೆಯಲ್ಲಿ ಶೌಚಾಲಯವನ್ನು ಆಧುನಿಕರೀತಿಯಲ್ಲಿ ನವೀಕರಿಸಿ, ಕೊರತೆಯಾಗಬಾರದೆಂದು ಹಲವು ನೂತನ ಶೌಚಾಲಯ ನಿರ್ಮಾಣವನ್ನೂ ಮಾಡಲಾಗಿದೆ.

**ವೇದಿಕೆಯ ಇಕ್ಕೆಲದ ಕೋಣೆಗಳ ನವೀಕರಣ:–** ವೇದಿಕೆಯ ಎರಡೂ ಪಾರ್ಶ್ವದಲ್ಲಿರುವ ಕೋಣೆಗಳನ್ನು ಸುಂದರಗೊಳಿಸಿ ಅಲ್ಲಿ ಪೀಠೋಪಕರಣಗಳ ಜೋಡಣೆ, ಗೋಡೆಯಲ್ಲಿ ಕಪಾಟುಗಳ ರಚನೆ, ಎರಡು ಕೋಣೆಗಳಲ್ಲಿ ಪ್ರತ್ಯೇಕ ಶೌಚಾಲಯ ನಿರ್ಮಾಣ ಮೊದಲಾದುವುಗಳು ಗ್ರಾಹಕರ ಸೌಲಭ್ಯಗಳಿಗಾಗಿ ಮಾಡಿದ ಕೆಲಸಗಳಾಗಿವೆ.

**ಕಿರು ಸಭಾಂಗಣ ಹಾಗೂ ಕೊಠಡಿಗಳ ನಿರ್ಮಾಣ:–** ಕಿರು ಸಮಾರಂಭಗಳಿಗಾಗಿ ಮಧ್ವ–ಲಕ್ಷ್ಮೀ ಸಭಾಂಗಣ, ಆನಂದ ರಾವ್ ಹಾಲ್ ಮತ್ತು ಶ್ಯಾಮ್‌ರಾವ್ ಹಾಲ್‌ನ ನವೀಕರಣ, ಗೋಪಮ್ಮ ಹಾಲ್ ಮತ್ತು ಮಧ್ವ–ಲಕ್ಷ್ಮೀ ಹಾಲ್‌ನ ಮೇಲ್ಭಾಗದಲ್ಲಿ ಮೂರು ಕೊಠಡಿಗಳ ನಿರ್ಮಾಣ ಮೊದಲಾದುವುಗಳು ಸಮಾಜ ಬಾಂಧವರು ಅವರ ಸಣ್ಣ ಪುಟ್ಟ ಸಮಾರಂಭಗಳನ್ನು ನಡೆಸಲು ಅನುಕೂಲಕರವಾದ ಪರಿವರ್ತನೆಯಾಗಿದೆ.

**ಪಾಕ ಶಾಲೆಯ ನವೀಕರಣ:–** ಮಂಟಪದ ಪಾಕಶಾಲೆಯು ತೀರಾ ಅಜೀರ್ಣಾವಸ್ಥೆಯಲ್ಲಿದ್ದು, ಅದನ್ನು ನವೀಕರಿಸಲಾಗಿದೆ. ಅಲ್ಲದೆ ಅದರ ಮಾಡನ್ನು ಹೊಗೆ ಹೊರಗೆ ಹೋಗುವಂತೆ ಎತ್ತರಿಸಿದೆ. ಪಾಕಶಾಲೆಯ ಒಲೆ, ನೆಲ, ಗೋಡೆ ಮೊದಲಾದುವುಗಳನ್ನು ನವೀಕರಿಸಿ ವಿಶಾಲವಾದ ಅಡುಗೆ ಕೋಣೆ ನಿರ್ಮಾಣ ಮಾಡಲಾಗಿದೆ. ಅಲ್ಲದೇ ಅಡುಗೆಗಾಗಿ ಗ್ಯಾಸ್ ಒಲೆ ಮತ್ತು ಅನಿಲ ಜಾಡಿಗಳ ಸಂಪರ್ಕವನ್ನು ವ್ಯವಸ್ಥೆಗೊಳಿಸಿದೆ.

ಇವಲ್ಲದೆ ಕೈತೊಳೆಯುವ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಊಟದ ಟೇಬಲ್–ಕುರ್ಚಿಗಳು, ಅಡುಗೆ ಹಾಗೂ ಬಡಿಸುವ ಪಾತ್ರೆಗಳ ಪೂರೈಕೆ ಮೊದಲಾದುವುಗಳನ್ನು ಕಾಲಕಾಲಕ್ಕೆ ಬದಲಾಯಿಸಿ ಆಧುನೀಕರಣ ಮಾಡಲಾಗಿದೆ.

ಇವೆಲ್ಲಾ ಶ್ರೀ ಶಾರದಾ ಮಂಟಪದಲ್ಲಿ ಮಾಡಲಾದ ಕಾಮಗಾರಿಗಳ ವಿಚಾರವಾದರೆ ಸಂಘದ ವತಿಯಿಂದ ಪ್ರತಿವರ್ಷ ನಡೆಯುವ ಶಾಶ್ವತ ಕೆಲಸಗಳು ಯಾವುದೇ ತೊಡರುಗಳಿಲ್ಲದೆ ನಡೆಯುತ್ತಿದೆ. ಅವು ಯಾವುದೆಂದರೆ–

**ಹಲವು ಧಾರ್ಮಿಕ ಸಮಾರಂಭಗಳು:–** ಪ್ರತಿವರ್ಷ ವಿಜಯ ದಶಮಿಯಂದು ಶ್ರೀ ಚಂಡಿಕಾಯಾಗವು ವಿಜೃಂಭಣೆಯಿಂದ ನಡೆಯುತ್ತದೆ. ಅದೇ ದಿನ ಸಮಾಜ ಬಾಂಧವರಿಗಾಗಿ ಅನೇಕ ಸಾಂಸ್ಕೃತಿಕ ಸ್ಪರ್ಧೆಗಳೂ ನಡೆದು ವಿಜೇತರಿಗೆ ಬಹುಮಾನ ವಿತರಣೆಯೂ ನಡೆಯುತ್ತದೆ. ಇದಲ್ಲದೆ ಶ್ರೀ ಶಂಕರ ಜಯಂತಿಯಂದು ಪ್ರತಿವರ್ಷ ಸಾಮೂಹಿಕ ಉಪನಯನ ಕಾರ್ಯಕ್ರಮ ವಿರಿಸಿ ಸಮಾಜದ ಅನೇಕ ವಟುಗಳಿಗೆ ಬ್ರಹ್ಮೋಪದೇಶ ನೀಡಲಾಗುತ್ತಿದೆ. ಸಾಮೂಹಿಕ ದುರ್ಗಾ ನಮಸ್ಕಾರ ಪೂಜೆ ಹಾಗೂ ಸಾಮೂಹಿಕ ಚಂಡಿಕಾಯಾಗವನ್ನು ಪ್ರತಿವರ್ಷ ನಡೆಸಿಕೊಂಡು ಬರುತ್ತಿದ್ದು, ಈ ಎರಡೂ ಕಾರ್ಯಕ್ರಮಗಳಿಗೆ ಸಮಾಜ ಬಾಂಧವರು ಮತ್ತು ಆಸುಪಾಸಿನ ಹೆಚ್ಚಿನ ಭಕ್ತರು ಆಗಮಿಸಿ ಸಹಕರಿಸುತ್ತಿದ್ದಾರೆ.

**ವಿದ್ಯಾರ್ಥಿ ವೇತನ ವಿತರಣೆ:–** ಪಿ ಯು ಸಿ ಮೇಲ್ಪಟ್ಟು ಎಲ್ಲಾ ತರಗತಿಗಳಲ್ಲಿ ಕಲಿಯುವ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪ್ರತಿವರ್ಷ ವಿದ್ಯಾರ್ಥಿವೇತನವನ್ನು ವಿತರಿಸಲಾಗುತ್ತಿದೆ. ಹಿಂದಿನಿಂದಲೂ ಈ ವಿದ್ಯಾರ್ಥಿವೇತನ ಕ್ಕಾಗಿ ಬಂಡವಾಳವನ್ನು ಮೀಸಲಿರಿಸಿದ್ದು, ವರ್ಷದಿಂದ ವರ್ಷಕ್ಕೆ ಈ ಮೊಬಲಗು ದಾನಿಗಳ ಸಹಕಾರದಿಂದ ಹೆಚ್ಚುತ್ತಿದೆ. ಹಾಗೂ ಕೊಡುವ ವಿದ್ಯಾರ್ಥಿವೇತನದ ಸಂಖ್ಯೆ ಮತ್ತು ಮೊಬಗಲಗೂ ಕೂಡಾ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಕೇವಲ ಬಡ್ಡಿ ಮಾತ್ರ ವಿದ್ಯಾರ್ಥಿವೇತನವಾಗಿ ವಿತರಿಸುವುದಾದರೂ ಪ್ರಕೃತ ವರ್ಷದಲ್ಲಿ 167 ವಿದ್ಯಾರ್ಥಿಗಳಿಗೆ ರೂ.2,50,000/–ಗಳನ್ನು ವಿದ್ಯಾರ್ಥಿ ವೇತನವಾಗಿ ವಿತರಿಸಲಾಗಿದೆ.

**ಡಾ। ದಯಾನಂದ ಎಸ್. ರಾವ್ ಸಾಲ ವಿದ್ಯಾರ್ಥಿವೇತನ:–** ಸಮಾಜದ ಬೇರೆ ಬೇರೆ ಸಂಘ ಸಂಸ್ಥೆಗಳಿಗೆ ಪ್ರತಿವರ್ಷ ಡಾ। ದಯಾನಂದ ಎಸ್. ರಾವ್ ಟ್ರಸ್ಟ್ ವತಿಯಿಂದ ನೀಡುವ ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ ವಿತರಣೆಗಾಗಿ ಮೊಬಲಗನ್ನು ಒದಗಿಸುವಂತೆ ನಮ್ಮ ಸಂಘಕ್ಕೂ ಪ್ರತಿವರ್ಷ ನೀಡುತ್ತಾರೆ. ಸಮಾಜದ ಸ್ನಾತಕೋತ್ತರ, ಇಂಜಿನಿಯರಿಂಗ್, ವೈದ್ಯಕೀಯ ಮೊದಲಾದ ತರಗತಿಗಳ ಅರ್ಹ ವಿದ್ಯಾರ್ಥಿಗಳಿಗೆ ಪ್ರತಿವರ್ಷ ನಿಬಂಧನೆಗೊಳಪಟ್ಟು ಕ್ರಮಪ್ರಕಾರ ಈ ಸಾಲವಿದ್ಯಾರ್ಥಿ ವೇತನವನ್ನು ವಿತರಿಸಲಾಗುತ್ತಿದೆ. ಸಾಲ ಪಡೆದುಕೊಂಡ ಫಲಾನುಭವಿಗಳು ಅವಧಿಯೊಳಗೆ ಮರುಪಾವತಿ ಮಾಡುತ್ತಿದ್ದು, ಇದು ಸಂಘದ ಚಟುವಟಿಕೆಗಳಿಗೆ ಸಮಾಜಬಾಂಧವರು ನೀಡುತ್ತಿರುವ ಸಹಕಾರಕ್ಕೆ ಉತ್ತಮ ಉದಾಹರಣೆ. ಈ ವರ್ಷವೂ ಈ ಸಾಲ ವಿದ್ಯಾರ್ಥಿವೇತನಕ್ಕೆ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀಮತಿ ಮೋಹಿನಿ ಡಿ. ರಾವ್ ಈ ಟ್ರಸ್ಟ್ ವತಿಯಿಂದ ರೂ.2,00,001ನ್ನು ನೀಡಿದ್ದಾರೆಂದು ತಿಳಿಸಲು ಸಂತೋಷವಾಗುತ್ತದೆ.

ಇದಲ್ಲದೆ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ತರಗತಿಗಳಲ್ಲಿ ಅತಿಹೆಚ್ಚು ಅಂಕ ಪಡೆದ ಮತ್ತು ಪದವಿಯಲ್ಲಿ ರ್‍ಯಾಂಕ್ ಪಡೆದ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಉದಯಚಂದ್ರ ಪುರಸ್ಕಾರ ಹಾಗೂ ಯಾವುದೇ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ರ್‍ಯಾಂಕ್ ವಿಜೇತ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ಪುರಸ್ಕಾರಗಳನ್ನು ಪ್ರತಿವರ್ಷ ವಿಜಯ ದಶಮಿಯಂದು ನೀಡಿ ಗೌರವಿಸಲಾಗುತ್ತಿದೆ.

**ವೈದ್ಯಕೀಯ ನೆರವು ವೇದಿಕೆ:–** ಸಮಾಜದಲ್ಲಿ ಆರ್ಥಿಕವಾಗಿ ಅಶಕ್ತರಾಗಿ ವೈದ್ಯಕೀಯ ಶುಶ್ರೂಷೆಯಲ್ಲಿರುವವರಿಗೆ ಅವರ ಬೇಡಿಕೆಯಂತೆ ಸಂಘವು ಆರ್ಥಿಕ ನೆರವು ನೀಡುತ್ತಿದೆ. ಇದಕ್ಕಾಗಿಯೂ ಪ್ರತ್ಯೇಕ ನೆರವು ವೇದಿಕೆಯನ್ನು ಸ್ಥಾಪಿಸಲಾಗಿದ್ದು, ದಾನಿಗಳ ಉದಾರ ನೆರವನ್ನು ಸಂಘವು ಅಪೇಕ್ಷಿಸುತ್ತದೆ.

**ಸಂಘ ಸಂಸ್ಥೆಗಳಿಗೆ ನೆರವು:–**ನಮ್ಮ ಸಮಾಜದ ಸಂಘ ಸಂಸ್ಥೆಗಳು ಹಲವಾರು ದೇವಳಗಳ ಜೀರ್ಣೋದ್ಧಾರ ಕಾರ್ಯಕ್ರಮ ಕೈಗೊಂಡಾಗ ಅಥವಾ ದೊಡ್ಡ ಕಾರ್ಯಕ್ರಮಗಳನ್ನು ನಡೆಸಿದಾಗ ಉಡುಪಿಯ ಸಂಘವು ತನ್ನ ಕೈಲಾದ ಆರ್ಥಿಕ ನೆರವು ನೀಡುವುದು ಹಿಂದಿನಿಂದಲೂ ಮಾಡಿಕೊಂಡು ಬಂದ ಸಂಪ್ರದಾಯ. ಈ ಸಂಪ್ರದಾಯವನ್ನು ಈಗಲೂ ಮುಂದುವರಿಸಿಕೊಂಡು ಬರುತ್ತಿದ್ದು, ಎಲ್ಲಾ ಸಂಘಟನೆಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿಕೊಂಡಿದೆ.

**ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ:–** ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದಲ್ಲಿ ಹಿಂದೆ ಯುವ ವಿಭಾಗವಿದ್ದು, ಅದು ಸಕ್ರೀಯವಾಗಿ ಕಾರ್ಯವೆಸಗುತ್ತಿದ್ದು ಸಮಾಜದ ಸಂಘಟನೆಗಾಗಿ ಪ್ರಾರಂಭಿಸಿದ ವಿನೂತನ ಕಾರ್ಯಕ್ರಮ ಪ್ರತಿವರ್ಷ ನಡೆಯುವ ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ. ಪ್ರಾರಂಭದಲ್ಲಿ ಕೇವಲ 5–6 ತಂಡಗಳು ಈ ಪಂದ್ಯಾಟಕ್ಕೆ ಆಗಮಿಸುತ್ತಿದ್ದು, ಇದೀಗ ಇದರ ಜನಪ್ರಿಯತೆ ಹೆಚ್ಚಿದ್ದು, ಸುಮಾರು 20ರಿಂದ 22 ತಂಡಗಳು ನಾಡಿನಾದ್ಯಂತದಿಂದ ಬರುತ್ತಿರುವುದು ನಮಗೆ ಹೆಮ್ಮೆ ಎನಿಸಿದೆ. ಇದೊಂದು ಸೌಹಾರ್ದ ಪಂದ್ಯಾಟವಾಗಿದ್ದು, ನಾಡಿನಾದ್ಯಂತ ಇರುವ ಯುವ ಶಕ್ತಿಯು ಒಂದೆಡೆ ಸೇರಿ ಪರಸ್ಪರ ಪರಿಚಯಿಸಿಕೊಳ್ಳಲು ಸಹಕಾರಿಯಾಗಿದೆ. ಅದೇ ದಿನ ಮಹಿಳಾ ವಿಭಾಗದ ವತಿಯಿಂದ ಶ್ರೀ ಶಾರದಾ ಮಂಟಪದಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಒಳಾಂಗಣ ಕ್ರೀಡಾ ಕೂಟವೂ ನೆರವೇರುತ್ತದೆ. ಇದಕ್ಕಾಗಿಯೂ ಬಲು ದೂರದೂರಿನಿಂದ ಮಹಿಳೆಯರು ಮಕ್ಕಳು ಆಗಮಿಸುತ್ತಿರುವುದು ವಿಶೇಷ. ಇದೀಗ ಯುವ ವಿಭಾಗ, ಮಹಿಳಾ ವಿಭಾಗಗಳು ಸಂಘದೊಂದಿಗೆ ವಿಲೀನಗೊಂಡಿದ್ದು ಸಂಘವೇ ಇದನ್ನು ಅತ್ಯಂತ ಸಮರ್ಪಕವಾಗಿ ನಡೆಸುತ್ತಿದೆ.

**ವಿದ್ಯಾರ್ಥಿಗಳಿಗಾಗಿ ಮಾಹಿತಿ:–**ಹಿಂದಿನ ಯುವ ವಿಭಾಗದ ವತಿಯಿಂದ ಪ್ರಾರಂಭಿಸಲ್ಪಟ್ಟ ಇನ್ನೊಂದು ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ಬೇರೆ ಬೇರೆ ವಿಷಯಗಳಲ್ಲಿ ತರಬೇತಿ ನೀಡುವುದು. ಅದರಲ್ಲಿಯೂ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ನೀಡುವ "ಪರೀಕ್ಷೆಯನ್ನು ಎದುರಿಸುವುದು ಹೇಗೆ?" ಕಾರ್ಯಕ್ರಮವು ಈಗಲೂ ಪ್ರತಿವರ್ಷ ನಡೆಯುತ್ತಿದ್ದು, ವಿದ್ಯಾರ್ಥಿಗಳಿಗೆ ಬಹು ಉಪಯುಕ್ತವಾಗುವುದೆಂದು ವಿದ್ಯಾರ್ಥಿಗಳಿಂದ ಮತ್ತು ಪೋಷಕರಿಂದ ಹೊಗಳಲ್ಪಟ್ಟಿದೆ. ಈ ಕಾರ್ಯಕ್ರಮ ಇನ್ನು ಮುಂದೆಯೂ ಮುನ್ನಡೆಯಲಿ ಎಂದು ಎಲ್ಲರ ಹಾರೈಕೆ.

**ಶ್ರೀ ಶಾರದಾ ಪತ್ರಿಕೆ:–** ಶ್ರೀ ಶಾರದಾ ಪತ್ರಿಕೆಯು ಉಡುಪಿಯ ಸಂಘದ ಮುಖವಾಣಿಯಾಗಿದ್ದು, ಯಾವುದೋ ಒಂದು ಶುಭ ಗಳಿಗೆಯಲ್ಲಿ ಆಗಿನ ಯುವ ವಿಭಾಗದಿಂದ ಸ್ಥಾಪಿಸಲ್ಪಟ್ಟಿದೆ. ಕೇವಲ 2 ಸಣ್ಣ ಪುಟಗಳೊಂದಿಗೆ ಪ್ರಾರಂಭಿಸಿ, ಆಗಿನ ಯುವ ವಿಭಾಗದ ಸದಸ್ಯರೇ ಅವರವರ ಸಾಧ್ಯತೆಯ ಬೇರೆ ಬೇರೆ ಊರಿನ ಸಮಾಜ ಬಾಂಧವರಿಗೆ ತಮ್ಮ ಸ್ವಂತಖರ್ಚಿನಲ್ಲಿ ಪತ್ರಿಕೆಯನ್ನು ಮನೆಮನೆಗೆ ಮುಟ್ಟಸಿದ್ದು ಈಗಲೂ ಒಂದು ಸವಿನೆನಪು. ಇದೇ ಪತ್ರಿಕೆ ಸಮಾಜ ಬಾಂಧವರ ಪ್ರೋತ್ಸಾಹದಿಂದ ವಿವಿಧ ಪ್ರಕಾರದ ಲೇಖನಗಳೊಂದಿಗೆ, ಸಂಘದ ಮಾರ್ಗದರ್ಶನದೊಂದಿಗೆ ಉತ್ತಮವಾಗಿ ಬೆಳೆದು ನಿಂತಿದೆ. ಇದರೊಂದಿಗೆ ಸುಮಾರು 1500 ಸದಸ್ಯತನ, ಪೋಷಕರು, ಮಹಾಪೋಷಕರಾಗಿ ಪತ್ರಿಕೆಯು ನಿರಂತರ ನಡೆಯುವಂತಾಗಲು ಕಾರಣರಾಗಿದ್ದಾರೆ. ಅದರ ಜೊತೆಗೆ ಪತ್ರಿಕೆಯನ್ನು ಪ್ರತಿ ತಿಂಗಳೂ 15ನೇ ದಿನಾಂಕದಂದು ಬಿಡುಗಡೆಗೊಳಿಸಬೇಕಾದ ಜವಾಬ್ದಾರಿಯನ್ನು ಪತ್ರಿಕೆಯ ಸಂಪಾದಕ ಮಂಡಳಿಯು ತಿಳಿದುಕೊಂಡು ಪತ್ರಿಕೆಯನ್ನು ಸುಂದರವಾಗಿ ವಿನ್ಯಾಸಗೊಳಿಸಿ ಸಿದ್ಧಪಡಿಸಿಕೊಡುತ್ತಿದೆ. ಅದಲ್ಲದೆ ಪತ್ರಿಕೆಯ ಅಂಚೆ ರವಾನೆಯ ಬಹುದೊಡ್ಡ ಕಾರ್ಯವು ಸಮಾಜ ಬಾಂಧವರ ಸಹಕಾರದಿಂದ ಕೇವಲ 2ರಿಂದ 3ಗಂಟೆಗಳ ಸಮಯದಲ್ಲಿ ಮುಗಿಯುತ್ತದೆ. ಇದಕ್ಕಾಗಿ ಆಗಮಿಸುವ ಬಂಧುಗಳು ಈ ಕೆಲಸ ಮುಗಿಸಿ ರಾತ್ರಿ ಊಟವನ್ನು ಶ್ರೀ ಶಾರದಾ ಮಂಟಪದಲ್ಲಿಯೇ ಮುಗಿಸುತ್ತಾರೆ. ಇದಕ್ಕಾಗಿ ಸಂಘಕ್ಕೆ ಯಾವುದೇ ಖರ್ಚಿನ ಹೊರೆ ಇಲ್ಲ. ನಮ್ಮ ಸಮಾಜದ ಯಾರೇ ಬಂಧುಗಳು ಇದರ ಪ್ರಾಯೋಜಕತ್ವವನ್ನು ನಿರ್ವಹಿಸುವುದು ಕಳೆದ 25 ವರ್ಷಗಳಿಂದಲೂ ನಿರಂತರವಾಗಿ ಸಾಗಿಬಂದ ಶ್ರೀ ಶಾರದಾ ಪತ್ರಿಕೆಯ ಹೆಮ್ಮೆಯ ನಡೆ. ಪತ್ರಿಕೆಗಾಗಿ ಸಾಕಷ್ಟು ಹಣ ಸಂಗ್ರಹವಿದ್ದು, ಪತ್ರಿಕೆಯು ಮುಂದೆಯೂ ನಿರಂತರ ನಡೆಯುವಂತಾಗಲು ಸಹಕಾರಿಯಾಗಿದೆ.

ಇಷ್ಟೆಲ್ಲಾ ಅತ್ಯುತ್ತಮ ಘನ ಕಾರ್ಯಗಳನ್ನು ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಕೈಗೊಂಡಿದ್ದರೂ ಯಾವುದೇ ಸಮಯಕ್ಕೂ ಯಾವುದಕ್ಕೂ ಕೊರತೆ ಇಲ್ಲದೆ, ಸಾಲವಿಲ್ಲದೆ ಸಂಘವನ್ನು ಮುನ್ನಡೆಸಿಕೊಂಡು ಬಂದಿದೆ. ಆಯಾಯ ಸಮಯದ ಆಡಳಿತ ಮಂಡಳಿಗಳು ಬೇರೆ ಬೇರೆ ವ್ಯಕ್ತಿ ಸಂಸ್ಥೆಗಳನ್ನು ಭೇಟಿ ಮಾಡಿ ಸಹಾಯಧನ ಸಂಗ್ರಹಿಸಿದ್ದು ಇಲ್ಲಿ ಉಲ್ಲೇಖನೀಯವಾಗಿದೆ. ಇನ್ನೂ ಕೂಡಾ ಮಾಡಬೇಕಾದ ಇಂತಹ ಘನ ಕಾರ್ಯಗಳು ಬಹಳಷ್ಟು ಇದ್ದು, ಅದನ್ನು ಮಾಡಬೇಕಾದ ಅನಿವಾರ್ಯತೆ ಆಡಳಿತ ಮಂಡಳಿಗಿದೆ. ಏಕೆಂದರೆ ಉಡುಪಿಯ ಇತರ ಕಲ್ಯಾಣ ಮಂಟಪಗಳ ಜೊತೆ ಪೈಪೋಟಿಯನ್ನು ನಡೆಸಿ ಈಗಿರುವ ನಂ. 1 ಕಲ್ಯಾಣ ಮಂಟಪದ ಸಾಲಿನಲ್ಲಿಯೇ ಶಾರದಾ ಮಂಟಪ ಸದಾ ಇರುವಂತೆ ನೋಡಿಕೊಳ್ಳಬೇಕಾದುದು ಆಡಳಿತಮಂಡಳಿಯ ಕರ್ತವ್ಯ.

ಅದಕ್ಕಾಗಿ ಈಗಿರುವ ಡೈನಿಂಗ್ ಹಾಲ್‌ನ ನವೀಕರಣ, ಹವಾನಿಯಂತ್ರಣದ ಅಳವಡಿಸುವಿಕೆ,ನೆಲ ಹಾಸುಗಳ ಬದಲಿಸಿ ಅಂದವಾದ ಗ್ರಾನೈಟ್ ಅಳವಡಿಸುವಿಕೆ, ಗೋಡೆ ಮತ್ತು ಕಿಟಿಕಿಗಳ ನವೀಕರಣ ಮೊದಲಾದುವುಗಳು ಮೊದಲ ಆದ್ಯತೆಯಾಗಿದೆ. ಇದನ್ನು ಯೋಜಿಸಿದ್ದ ಈಗಿನ ಆಡಳಿತ ಮಂಡಳಿಯು ಎಲ್ಲಾ ಸಮಾಜದವರೂ ಸಮುದಾಯ ಭವನ ನಿರ್ಮಾಣಕ್ಕಾಗಿ ಸರಕಾರದಿಂದ ಪಡೆಯುವ ಸಹಯಧನವನ್ನು ಸ್ಥಾನಿಕ ಸಮಾಜವೂ ಏಕೆ ಪಡೆಯಬಾರದೆಂದು ಯೋಚಿಸಿ ಕಾರ್ಯರೂಪಕ್ಕೆ ಇಳಿದಿತ್ತು. ಅಲ್ಲದೆ (ರೂ.3 ಕೋಟಿವರೆಗೆ) ಸಹಾಯಧನ ಸಿಗುವ ಭರವಸೆ ಸರಕಾರದಿಂದ ಸಿಕ್ಕಿತ್ತು. ಈ ನಿಟ್ಟಿನಲ್ಲಿ ಹೆಚ್ಚಿನ ಕೆಲಸ ಕಾರ್ಯಗಳೂ ನಡೆದಿತ್ತು. ಈ ಎಲ್ಲಾ ಕಾರ್ಯಗಳ ಹಿಂದೆ ಆಡಳಿತ ಮಂಡಳಿಯ ಇಚ್ಚಾ ಶಕ್ತಿಯೇ ಕಾರಣ. ಮುಂದಿನ ದಿನಗಳಲ್ಲಿಯೂ ಕೂಡಾ ಆಡಳಿತ ಮಂಡಳಿಯಲ್ಲಿ ಅನುಭವೀ ಹಿರಿಯರು, ಅನೇಕ ವರ್ಷಗಳ ಕಾಲ ಸಂಘದಲ್ಲಿದ್ದು ಕೆಲಸ ಮಾಡಿದ ತಿಳುವಳಿಕೆದಾರರು, ಹಿಂದೆ ಯುವ ವಿಭಾಗದಲ್ಲಿದ್ದು ಆಡಳಿತ ಮಂಡಳಿಯ ನಿರ್ದೇಶಕರಾಗಿ ಮುನ್ನುಗ್ಗುವ ಸ್ವಭಾವದ ವ್ಯಕ್ತಿಗಳಂತಿರುವ ನಿರ್ದೇಶಕರು ಇದ್ದರೆ ಕೈಗೆತ್ತಿಕೊಂಡ ಕೆಲಸಗಳನ್ನು ಕೈಬಿಡುವ ಪ್ರಮೇಯವೇ ಬರಲಾರದು. ಈ ಬಗ್ಗೆ ಮುಂದಿನ ಜನಾಂಗವು ಬಹಳಷ್ಟು ಜವಾಬ್ದಾರಿಯನ್ನು ಹೊಂದಿದೆ. ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಇನ್ನಷ್ಟು ಬೆಳೆದು ಶ್ರೀ ಶಾರದಾ ಮಂಟಪವು ಅನೇಕ ಸವಲತ್ತುಗಳಿಂದ ಕೂಡಿದ ಸಭಾ ಭವನವಾಗಬೇಕು, ಅಲ್ಲದೆ ನಮ್ಮ ಸಮಾಜದ ಎಲ್ಲ ವರ್ಗದ ಜನತೆಗೆ ಸಹಕಾರಿಯಾಗುವಂತೆ ಬಂದ ಆದಾಯದ ಸದ್ಬಳಕೆಯಾಗಿ ಉಡುಪಿಯ ಒಂದು ಆದರ್ಶ ಸಂಸ್ಥೆಯಾಗಿ ಬೆಳವಣಿಗೆ ಯಾಗಬೇಕು. ಅಂತಾದರೆ ಜಗದ್ಗುರುಗಳು ಹೇಳಿದ "ನಮ್ಮ ಶಾರದಾ ಮಂಟಪ" ಎಂಬ ಹೆಮ್ಮೆಯ ಕೋಡು ನಮ್ಮದಾಗಬಹುದು.

# ಪ್ರತಿಭಾನ್ವಿತರು

2014-15ನೇ ಸಾಲಿನಲ್ಲಿ 10ನೇ ಮತ್ತು ಪಿ.ಯು.ಸಿ. ತರಗತಿಗಳಲ್ಲಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ಕೃಷ್ಟ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳ ವಿವರಗಳನ್ನು ಪ್ರಕಟಿಸಲು 'ಶ್ರೀಶಾರದಾ' ಹರ್ಷ ವ್ಯಕ್ತಪಡಿಸುತ್ತದೆ. ನಮ್ಮ ಸಮಾಜದ ಈ ಹೆಮ್ಮೆಯ ವಿದ್ಯಾರ್ಥಿಗಳ ವಿಶಿಷ್ಟ ಸಾಧನೆಗಾಗಿ ಅವರೆಲ್ಲರನ್ನೂ ಅಭಿನಂದಿಸುತ್ತಾ ಮುಂದಿನ ತರಗತಿಗಳಲ್ಲಿಯೂ ಇನ್ನಷ್ಟು ಹೆಚ್ಚಿನ ಸಾಧನೆ ಮಾಡುವಂತಾಗಲಿ ಎಂದು 'ಶ್ರೀಶಾರದಾ' ಬಳಗವು ಶುಭ ಹಾರೈಸುತ್ತದೆ.

## 10ನೇ ತರಗತಿಯಲ್ಲಿ ಉತ್ಕೃಷ್ಟ ಶ್ರೇಣಿಯಲ್ಲಿ ತೇರ್ಗಡೆ



ಹೆಸರು : ರಚನಾ
ತಂದೆ : ಶ್ರೀ ಕೆ. ಮಧುಸೂಧನ ರಾವ್
ತಾಯಿ : ಶ್ರೀಗೌರಿ
ವಿಳಾಸ : ಬೆಂಗಳೂರು
ಶಾಲೆ : ...........
..................
ಅಂಕ : 610/625
ಶೇಕಡಾ : 95.2



ಹೆಸರು : ಅಕ್ಷತಾ
ತಂದೆ : ಶ್ರೀ ಜ್ಞಾನೇಶ್ ಎನ್.
ತಾಯಿ : ಶ್ರೀಮತಿ ವಿಜಯಾ ಜೆ.
ವಿಳಾಸ : ಮುದರಂಗಡಿ, ಪಿಲಾರು ಉಡುಪಿ
ಶಾಲೆ : ಸೈಂಟ್ ಫ್ರಾನ್ಸಿಸ್ ಆಂಗ್ಲ ಮಾ.ಪ್ರೌಢಶಾಲೆ, ಮುದರಂಗಡಿ
ಅಂಕ : 591/625
ಶೇಕಡಾ : 95%



ಹೆಸರು : ಅಭಿಷೇಕ್ ರಾವ್ ಎಮ್.
ತಂದೆ : ದಿನೇಶ್ ರಾವ್ ಎಮ್.
ತಾಯಿ : ಡಿ.ಅನ್ನಪೂರ್ಣೇಶ್ವರಿ
ವಿಳಾಸ : ಮಿತ್ತೂರು, ಪುತ್ತೂರು ತಾ.
ಶಾಲೆ : ವಿವೇಕಾಂದ ಆಂಗ್ಲ ಮಾಧ್ಯಮ ಶಾಲೆ, ಪುತ್ತೂರು
ಅಂಕ : 614/625
ಶೇಕಡಾ : 98.24



ಹೆಸರು : ರಶ್ಮಿ ಬಿ.
ತಂದೆ : ಶ್ರೀ ಬಿ. ಶಿವರಾಜ
ತಾಯಿ : ಶ್ರೀಮತಿ ಬಿ.ರಾಜೇಶ್ವರಿ
ವಿಳಾಸ : ಅಂಬಲಪಾಡಿ, ಉಡುಪಿ.
ಶಾಲೆ : ಸರ್ಕಾರಿ ಪ್ರೌಢಶಾಲೆ ಒಳಕಾಡು.
ಅಂಕ : 592/625
ಶೇಕಡಾ : 94.72



ಹೆಸರು : ಕಾರ್ತಿಕ್ ಎಸ್.ರಾವ್
ತಂದೆ : ಶ್ರೀ ಸಂತೋಷ್‌ಕುಮಾರ್
ತಾಯಿ : ಶ್ರೀಮತಿ ಅಮಿತಾ
ವಿಳಾಸ : .....................
ಶಾಲೆ : ....................
ಅಂಕ : 606/625 (ICSE)
ಶೇಕಡಾ : 97



ಹೆಸರು : ಸಾಗರ್ ಪಿ.
ತಂದೆ : ಶ್ರೀ ಡಾ| ಪಿ. ಮನೋಹರ್
ತಾಯಿ : ಶ್ರೀಮತಿ ಸುನೀತಾ
ವಿಳಾಸ : ಬೆಳ್ಳಾರೆ, ಸುಳ್ಯ ತಾಲೂಕು.
ಶಾಲೆ : ಜ್ಞಾನಗಂಗಾ ಸೆಂಟ್ರಲ್ ಶಾಲೆ ಬೆಳ್ಳಾರೆ
ಅಂಕ : 10/10 (CBSE)



ಹೆಸರು : ಶಮಾತ್ಮಿಕ
ತಂದೆ : ಶ್ರೀ ಶ್ರೀಧರ್ ರಾವ್
ತಾಯಿ : ಶ್ರೀಮತಿ ಪ್ರತಿಭಾ
ವಿಳಾಸ : ಮೆಜೆಸ್ಟಿಕ್ ಪ್ರೆಸ್, ರಥಬೀದಿ, ಉಡುಪಿ
ಶಾಲೆ : ವಿದ್ಯೋದಯ ಪಬ್ಲಿಕ್ ಸ್ಕೂಲ್ ಉಡುಪಿ (ICSE)
ಅಂಕ : 570/600
ಶೇಕಡಾ : 95



ಹೆಸರು : ವೈ. ಮಾನಸಾ ರಾವ್
ತಂದೆ : ಡಾ| ವೈ. ಸುದರ್ಶನ್ ರಾವ್
ತಾಯಿ : ವಿದ್ಯಾ ಎಸ್. ರಾವ್
ವಿಳಾಸ : ಕುಕ್ಕಿಕಟ್ಟೆ, ಉಡುಪಿ
ಶಾಲೆ : ವಿದ್ಯೋದಯ ಪಬ್ಲಿಕ್ ಸ್ಕೂಲ್ ಉಡುಪಿ (ICSE)
ಅಂಕ : 572/600
ಶೇಕಡಾ : 95.33



ಹೆಸರು : ವರ್ಷಿಣಿ. ರಾವ್ ಐ.ಕೆ.
ತಂದೆ : ಸುದರ್ಶನ್ ಪ್ರಸಾದ್ ಐ.ಕೆ.
ತಾಯಿ : ಶ್ರೀದೇವಿ ಪ್ರಸಾದ್ ಐ.ಕೆ.
ವಿಳಾಸ : ಪಡುಬಿದ್ರಿ
ಶಾಲೆ : ಲಕ್ಷ್ಮೀ ಜನಾರ್ದನ ಆಂಗ್ಲ ಮಾಧ್ಯಮ ಶಾಲೆ, ಬೆಳ್ಮಣ್ ನಂದಳಿಕೆ
ಅಂಕ : 10/10 (CBSE)



ಹೆಸರು : ಕೆ. ಶ್ರೇಯಾ ರಾವ್
ತಂದೆ : ಶ್ರೀ ಗಣೇಶ್ ಕೆ.ಆರ್.
ತಾಯಿ : ಶ್ರೀಮತಿ ಸುಧಾ ರಾವ್
ವಿಳಾಸ : ಕುಕ್ಕಿಕಟ್ಟೆ, ಉಡುಪಿ
ಶಾಲೆ : ಸಂತಸಿಸಿಲಿ ಆಂಗ್ಲ ಮಾಧ್ಯಮ ಶಾಲೆ, ಉಡುಪಿ.
ಶೇಕಡಾ : 618/625



ಹೆಸರು : ನಿಧಿ
ತಂದೆ : ಶ್ರೀ ಎನ್.ಲಕ್ಷ್ಮೀಪ್ರಸಾದ್
ತಾಯಿ : ಶ್ರೀಮತಿ ಶಾಂತಿ ಎಲ್.ಪ್ರಸಾದ್
ವಿಳಾಸ : ಮಂಗಳೂರು
ಶಾಲೆ : ಕೆನರಾ ಗರ್ಲ್ಸ್ ಹೈಸ್ಕೂಲು ಡೊಂಗರಕೇರಿ, ಮಂಗಳೂರು
ಅಂಕ : 578/625
ಶೇಕಡಾ : 92.4

## ಪಿ.ಯು.ಸಿ.ಯಲ್ಲಿ ಉತ್ಕೃಷ್ಟ ಶ್ರೇಣಿಯಲ್ಲಿ ತೇರ್ಗಡೆ



ಹೆಸರು : ಹರ್ಷಿತಾ ರಾವ್
ತಂದೆ : ಶರತ್ ಕುಮಾರ್
ತಾಯಿ : ಶ್ಯಾಮಲಾ
ವಿಳಾಸ : ಹಳೆಯಂಗಡಿ
ಕಾಲೇಜು : ಎಸ್.ಎನ್.ಎಸ್.ಜಿ. ಪಿ.ಯು.ಕಾಲೇಜು ಹಳೆಯಂಗಡಿ
ಅಂಕ : 540/600 (ವಾಣಿಜ್ಯ)
ಶೇಕಡಾ : 90

---

**ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),** ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು "ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ"ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2015-2016ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ಅರ್ಜಿ ಫಾರಂನ್ನು ಶಾರದಾ ಮಂಟಪ ಅಥವಾ ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ಪಡೆದು ಫಾರಂ ಭರ್ತಿ ಮಾಡಿ, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.30-09-2015ರ ಒಳಗೆ ತಲುಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು, ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754**

---

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀ ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.

### 2014-15ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಪ್ರಿಯರೇ, ತಾ.30-05-2015

ನಮ್ಮ ಸಂಘದ 2014-15ನೇ ಸಾಲಿನ ವಾರ್ಷಿಕ ಮಹಾಸಭೆಯು **ತಾ.21-06-2015ನೇ ರವಿವಾರ ಅಪರಾಹ್ನ 4-00 ಗಂಟೆಗೆ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ** ಸಭಾಭವನದಲ್ಲಿ ನಡೆಯಲಿದೆ. ಸಂಘದ ಸದಸ್ಯರೆಲ್ಲರೂ ಈ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ವಿಷಯ ಸೂಚಿ**


1. ಪ್ರಾರ್ಥನೆ
2. ಸ್ವಾಗತ
3. 2014-15ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸಿನ ಅಂಗೀಕಾರ
4. 2013-14ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿಯ ಅಂಗೀಕಾರ
5. 2014-15ನೇ ವರ್ಷದ ಕಾರ್ಯಕ್ರಮಗಳ ವರದಿಯ ಅಂಗೀಕಾರ
6. 2014-15ನೇ ವರ್ಷದ ಆಯ-ವ್ಯಯ ಮತ್ತು ಆಸ್ತಿ-ಜವಾಬ್ದಾರಿ ತಃಖ್ತೆಗಳ ಪರಿಶೋಧಿತ ವರದಿಯ ಮಂಡನೆ ಮತ್ತು ಅಂಗೀಕಾರ
7. 2015-16ನೇ ವರ್ಷದ ಅಂದಾಜು ಆಯ-ವ್ಯಯ ಪಟ್ಟಿಯ ಅಂಗೀಕಾರ.
8. 2015-16ನೇ ವರ್ಷಕ್ಕೆ ಲೆಕ್ಕಪರಿಶೋಧಕರ ನೇಮಕ
9. ಅಧ್ಯಕ್ಷರ ಅನುಮತಿಯ ಮೇರೆಗೆ ಬರತಕ್ಕ ಇತರ ವಿಷಯಗಳು
10. ಮುಂದಿನ 3 ವರ್ಷಕ್ಕೆ ನೂತನ ಆಡಳಿತ ಮಂಡಳಿ ಆಯ್ಕೆ.
11. ಧನ್ಯವಾದ ಸಮರ್ಪಣೆ

ಸಹಿ/-
**ಕಾರ್ಯದರ್ಶಿ**

**ವಿ.ಸೂ. : ಚರ್ಚೆಯ ವಿಷಯ ಇದ್ದಲ್ಲಿ ಅದನ್ನು ತಾ.17-06-2015ರ ಸಂಜೆ 5 ಗಂಟೆಗೆ (ಕಛೇರಿಯ ಕೆಲಸದ ಸಮಯದಲ್ಲಿ) ಮುಂಚಿತವಾಗಿ ಕಾರ್ಯದರ್ಶಿ/ಮೆನೇಜರ್‌ರವರಿಗೆ ಪತ್ರ ಮೂಲಕ ತಲುಪಿಸಬೇಕು.**

# ವೈದ್ಯಕೀಯ ವೇದಿಕೆ–ಆರೋಗ್ಯ ಮಾಹಿತಿ

ಡಾ। ವೈ. ಸುದರ್ಶನ ರಾವ್



**ಪ್ರಶ್ನೆ: ಸ್ವಚ್ಛತೆ ಹಾಗೂ ಆರೋಗ್ಯ**

ಹೊಸದಾಗಿ ಪ್ರಧಾನ ಮಂತ್ರಿಗಳಾಗಿ ಅಧಿಕಾರಕ್ಕೆ ಬಂದ ಶ್ರೀ ನರೇಂದ್ರ ಮೋದಿಯವರು ಸ್ವಚ್ಛ ಭಾರತದ ಕನಸನ್ನು ಹೊತ್ತು ಪೊರಕೆ ಹಿಡಿದು ಬೀದಿ ಗುಡಿಸಿದ್ದೇ ತಡ ಅವರೊಂದಿಗೆ ಮಂತ್ರಿ ಮಾಗಧರು, ತಳುಕು ಬಳುಕಿನ ರಂಗ ನಟ ನಟಿಯರು, ಸೂಟು ಬೂಟಿನ ಬಿಳೀ ಕಾಲರಿನ ಜನರೆಲ್ಲರೂ ಸೇರಿ ಪೊರಕೆ ಹಿಡಿದು ಸ್ವಚ್ಛ ಭಾರತದ ಘೋಷಣೆ ಮೊಳಗಿಸಿದರು. ಇದರಿಂದ ಭಾರತ ಸ್ವಚ್ಛವಾದೀತೋ ಇಲ್ಲವೋ ಎಂಬುದನ್ನು ಕಾದು ನೋಡಬೇಕಾದರೂ, ಇದು ಸ್ವಚ್ಛತೆ ಎಂಬ ಶಬ್ದವೊಂದನ್ನು ಜನ ಸಾಮಾನ್ಯರ ತಲೆಯೊಳಗೆ ಹೊಕ್ಕಿಸುವ ಮಟ್ಟಿಗಾದರೂ ಸದ್ಯಕ್ಕೆ ಯಶಸ್ವಿಯಾಗಿರುವುದು ಖಂಡಿತಾ. ಈ ಲೇಖನದಿಂದ ಸ್ವಚ್ಛತೆ ಎಂದರೆ ಪೊರಕೆ ಹಿಡಿದು ಗುಡಿಸಿ ಕಸವನ್ನು ಆಚೆ ಎಸೆಯುವುದು ಮಾತ್ರವೇ ಅಥವಾ ಅದರಲ್ಲಿ ಇನ್ನೂ ಹೆಚ್ಚಿನದು ಏನಾದರೂ ಇದೆಯೋ ಎಂದು ತಿಳಿಯೋಣವೇ?

**ಸ್ವಚ್ಛತೆ ಎಂದರೇನು?**

ಸ್ವಚ್ಛತೆ ಎನ್ನುವ ಪದದ ವ್ಯಾಖ್ಯಾನ ಎಲ್ಲೂ ಸಿಗದು, ವೈದ್ಯಕೀಯ ಪುಸ್ತಕಗಳಲ್ಲಿ ಕೂಡಾ ಸ್ವಚ್ಛತೆ ಎನ್ನುವ ಪದದ ಉಲ್ಲೇಖ ಸಾವಿರಾರು ಸಲ ಇದೆಯಾದರೂ ಅದೇನೆಂಬುದರ ಬಗ್ಗೆ ವಿವರಣೆ ಇಲ್ಲ. ಹಾಗಾಗಿ ನಾವೇ ಸ್ವಚ್ಛತೆ ಎಂದರೆ ಹೀಗೆ ಎಂದು ಚೌಕಟ್ಟೊಂದನ್ನು ಹಾಕಿಕೊಳ್ಳಬೇಕಾಗಿದೆ. ಸ್ವಚ್ಛತೆ ಎಂದರೆ ನಾವು (ಅಂದರೆ ನಮ್ಮ ದೇಹ) ಹಾಗೂ ನಾವು ಜೀವಿಸುವ ಪರಿಸರ ಇವೆರಡೂ ನಮ್ಮ ಪಂಚೇಂದ್ರಿಯಗಳಿಗೆ ಆಹ್ಲಾದಕರವಾಗಿರುವಂತೆ ಇರುವುದು ಎನ್ನಬಹುದೇ? ಇದನ್ನು ವಿವರಿಸಿ ಹೇಳುವುದಾದರೆ ಘ್ರಾಣೇಂದ್ರಿಯಕ್ಕೆ ಸುಗಂಧ ಭರಿತವಾಗಿಯೂ, ಕಣ್ಣಿಗೆ ಕಾಣಲು ಸುಂದರವಾಗಿಯೂ, ಕಿವಿಗೆ ಇಂಪಾಗಿಯೂ, ಮನಸ್ಸಿಗೆ ಮುದವನ್ನು ಉಂಟು ಮಾಡುವಂತೆಯೂ ಇರುವ ಪರಿಸರವನ್ನೆ ನಾವು ಸ್ವಚ್ಛ ಪರಿಸರವೆನ್ನುವುದಲ್ಲವೇ?.

ಇಂತಹಾ ಸ್ವಚ್ಛವಾದ ಪರಿಸರವು ಆರೋಗ್ಯಕ್ಕೆ ಪೂರಕವಲ್ಲದೇ ಇದ್ದೀತೆ? ಆದರೆ ರಾಸಾಯನಿಕಗಳನ್ನು, ಸಿಮೆಂಟು ಕಾಂಕ್ರೀಟು ಬಳಸಿ ಸುಂದರವಾಗಿ ಸೃಷ್ಟಿಸಿದ ಸ್ವಚ್ಛವೆನಿಸುವ ವಾತಾವರಣವು ನಿಜವಾಗಿಯೂ ಸ್ವಚ್ಛವೇ? ಆರೋಗ್ಯಕ್ಕೆ ಪೂರಕವೇ? ಹಾಗಾದರೆ ಯಾವ ರೀತಿ ನಾವು ಸ್ವಚ್ಛವಾದ ಪರಿಸರವನ್ನು ಬೆಳೆಸಿಕೊಳ್ಳಬೇಕು ಎಂಬುದರ ಬಗ್ಗೆ ಆರೋಗ್ಯವನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ಬರೆದ ವೈಜ್ಞಾನಿಕ ವಿಶ್ಲೇಷಣೆ ಇಲ್ಲಿದೆ.

**ಎಲ್ಲದಕ್ಕೂ ಮೊದಲು ಎರಡು ವಿಚಾರಗಳನ್ನು ಸ್ಪಷ್ಟ ಪಡಿಸಿಕೊಳ್ಳೋಣ.**

**ಮೊದಲನೆಯದಾಗಿ,** ಸ್ವಚ್ಛತೆ ಎಂಬುದು ಪ್ರಕೃತಿಯಲ್ಲೇ ಅಡಕವಾಗಿರುವ ವಿಷಯವೇ ಹೊರತು ಹೆಚ್ಚಿನವರು ಗ್ರಹಿಸಿರುವಂತೆ ನಾವು ಕೃತಕವಾಗಿ ಸೃಷ್ಟಿಸ ಬೇಕಾದ ವಾತಾವರಣವಲ್ಲ. ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ಪ್ರಕೃತಿಯೇ ಹಲವಾರು ವಿಧಾನಗಳನ್ನು ಅಳವಡಿಸಿಕೊಂಡಿದೆ. ಸ್ವಚ್ಛ ಪರಿಸರ ಸೃಷ್ಟಿಸಲು ಮನುಷ್ಯನು ಕಂಡುಹಿಡಿದ ಅನೇಕ ವಿಧಾನಗಳು ಆರೋಗ್ಯಕ್ಕೆ ಪೂರಕವಾಗಿಲ್ಲ, ವಿರುದ್ಧವಾಗಿ ಕೆಲವು ಆರೋಗ್ಯಕ್ಕೆ ಮಾರಕಗಳಾಗಿವೆ

**ಎರಡನೆಯದಾಗಿ,** ಸ್ವಚ್ಛತೆ ಕೇವಲ ಕಣ್ಣಿಗೆ ಕಾಣುವ ನೆಲ / ಭೂಮಿಗೆ ಮಾತ್ರ ಸೀಮಿತವಲ್ಲ. ನಾವು ಕುಡಿಯುವ ನೀರು, ಉಸಿರಾಡುವ ಗಾಳಿ. ಒಡ್ಡಿಕೊಳ್ಳುವ ಬಿಸಿಲು ಹಾಗೂ ಶಬ್ದಾತಿ ನಿಶ್ಶಬ್ದ ತರಂಗಗಳು ಕೂಡ ಸ್ವಚ್ಛವಾಗಿರ ಬೇಕಾದದ್ದು ನಮ್ಮ ಆರೋಗ್ಯಕ್ಕೆ ಅಷ್ಟೇ ಅವಶ್ಯಕ.

ಸ್ವಚ್ಛತೆಯನ್ನು ಎರಡು ಭಾಗವಾಗಿ ಮಾಡಬಹುದು :– ಮೊದಲನೆಯದು ಸ್ವಂತ ದೇಹದ ಸ್ವಚ್ಛತೆ, ಎರಡನೆಯದು ನಮ್ಮ ಪರಿಸರದ ಸ್ವಚ್ಛತೆ. ಈ ಲೇಖನದಲ್ಲಿ ಕೈಗೆತ್ತಿಕೊಂಡಿರುವುದು ಎರಡನೆಯ ವಿಷಯ, ನಮ್ಮ ಪರಿಸರದ ಸ್ವಚ್ಛತೆ.

ದೇವರ (ನಾಸ್ತಿಕರು ಕ್ಷಮಿಸಬೇಕು) ಸೃಷ್ಟಿಯಲ್ಲಿ ಯಾರಿಗೂ ಬೇಡವಾದ ಹಾಗೂ ಯಾವುದಕ್ಕೂ ಉಪಯೋಗವಿಲ್ಲದ ವಸ್ತು ಇಲ್ಲವೇ ಇಲ್ಲ. ಉಪಯೋಗವಿಲ್ಲದ್ದನ್ನು ಸೃಷ್ಟಿಸುತ್ತಿರುವವರು ನಾವೇ. ನಾವು ಬೇಕಾದುದನ್ನು ಉಪಯೋಗಿಸಿ, ಬೇಡವಾದದನ್ನು ಸೃಷ್ಟಿಸಿ ಅದನ್ನು ತ್ಯಾಜ್ಯವೆಂದು ಕರೆಯುತ್ತೇವೆ. ಈ ತ್ಯಾಜ್ಯಗಳೇ ಸ್ವಚ್ಛತೆಯ ಕಂಟಕಗಳು. ಈ ತ್ಯಾಜ್ಯವೇ ವಾಸನೆಯ ಮೂಲ, ಈ ತ್ಯಾಜ್ಯವೇ ಕೊಳಕು ನೀರಿಗೆ ಕಾರಣ. ಈ ತ್ಯಾಜ್ಯಗಳೇ ನಮ್ಮ ಗಾಳಿಯನ್ನು ಹಾಳು ಮಾಡಿರುವುದು. ತ್ಯಾಜ್ಯವಿಲ್ಲದಿರುತ್ತಿದ್ದರೆ ನಮ್ಮ ಸುಂದರವಾದ ಪರಿಸರವನ್ನು, ನೀರನ್ನು ಗಾಳಿಯನ್ನು ಸ್ವಚ್ಛ ಮಾಡುವ ಪ್ರಮೇಯವೇ ಇಲ್ಲವಾಗಿರುತಿತ್ತು.

ತ್ಯಾಜ್ಯವನ್ನು ಗಣಿತದಲ್ಲಿ ಯಾವ ರೀತಿ ಕೂಡಿಸಿ ಕಳೆದರೂ ಉಳಿಯುವಂತಹ ಶೇಷಕ್ಕೆ ಹೋಲಿಸಬಹುದು. ನಾವು ಇದರಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ. ವಿಲೇವಾರಿ ಮಾಡುವುದೊಂದೇ ಮಾರ್ಗ. ನಮ್ಮ ದೇಹ ಹೊರ ಹಾಕಿದ್ದು ಜೈವಿಕ ತ್ಯಾಜ್ಯ (ಮಲ) ವಾದರೆ ನಾವು ಉಪಯೋಗಿಸಿ ಬಿಸಾಡಿದ್ದು ಕಸವಾಗುತ್ತದೆ. ದೇಹ ಹೊರಹಾಕಿದ ಮಲ ಹಾಗೂ ನಾವು ಬಿಸಾಕಿದ ಕಸಗಳು ಸೇರಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪ್ರಕೃತಿಯುತನ್ನ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ವಿಧಾನಗಳಿಗೆ ಹೇಗೆ ಅಡ್ಡಿಯುಂಟು ಮಾಡುತ್ತವೆ, ನಮ್ಮ ಆರೋಗ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಹಾಗೂ ಆರೋಗ್ಯಕ್ಕೆ ಪೂರಕವಾಗಿ ಪರಿಸರದ ಸ್ವಚ್ಛತೆಯನ್ನು ಉಳಿಸಿಕೊಳ್ಳುವ ಸಲಹೆಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.

**ಪ್ರಕೃತಿಯು ಸ್ವತಃ ತನ್ನ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ವಿಧಾನಗಳು ಯಾವುವು?**

ಪ್ರಕೃತಿಯು ತನ್ನಲ್ಲಿ ಜೀವಿಸುವ ಪ್ರತಿಯೊಂದು ಜೀವಿಯೂ ಆಹಾರವನ್ನು ಸೇವಿಸಲೇಬೇಕು ಎಂಬ ನಿಯಮವನ್ನು ಮಾಡಿಟ್ಟಿದೆ. ಆಹಾರ ತಿನ್ನದಿದ್ದರೆ ಜೀವಿಗಳು ಬದುಕಲಾರವು ಎಂಬಷ್ಟು ಅನಿವಾರ್ಯವಾಗಿದೆ ಈ ನಿಯಮದ ಪಾಲನೆ. ಹಾಗೆಯೆ ಪ್ರಕೃತಿಯು ಒಂದೊಂದು ಜೀವಿಗೆ ಒಂದೊಂದು ಆಹಾರವನ್ನು ನಿಗದಿ ಮಾಡಿದೆ. ಜೀವಿಗಳಿಗೆ ಇನ್ನೊಂದು ಜೀವಿಯ ದೇಹವೆ ಆಹಾರ. ಕೆಲವು ಜೀವಿಗಳು ಇನ್ನೊಂದು ಪ್ರಾಣಿಯನ್ನು ಬೇಟೆಯಾಡಿ ಕೊಂದು ತಿಂದರೆ ಇನ್ನು ಕೆಲವು ಅಲ್ಲಲ್ಲಿ ಸತ್ತು ಬಿದ್ದ ಜೀವಿಗಳನ್ನು ತಿನ್ನುವವು. ಈ ಸತ್ತು ಬಿದ್ದಿರುವ ಜೀವಿಗಳನ್ನು ತಿನ್ನುವ ಜೀವಿಗಳನ್ನು ಸ್ಕಾವೆಂಜರ್ (scavenger) ಎಂದು ಕರೆಯುತ್ತಾರೆ. ನಮ್ಮ ಮನೆಯ ಸುತ್ತ ಮುತ್ತಲಿರುವ ಕಾಗೆ ಹಾಗೂ ಹದ್ದು ಈ ಸ್ಕಾವೆಂಜರ್ಗಳಿಗೆ ಒಂದು ಉತ್ತಮ ಉದಾಹರಣೆ. ಈ ಪ್ರಾಣಿಗಳು ಅಲ್ಲಲ್ಲಿ ಸತ್ತು ಬಿದ್ದ ಪ್ರಾಣಿಗಳು, ಚೆಲ್ಲಾಡಿದ ಆಹಾರ ಪದಾರ್ಥ, ಹಣ್ಣು ಹಂಪಲುಗಳನ್ನು ತಿಂದು ಮುಗಿಸುತ್ತವೆ. ಒಂದು ವೇಳೆ ಈ ಸ್ಕಾಂವೆಂಜರ್ಗಳಿಲ್ಲದಿರುತ್ತಿದ್ದರೆ ಇಡೀ ಪ್ರಪಂಚವು ಸತ್ತ ಜೀವಿಗಳ ದೇಹದಿಂದ ತುಂಬಿ ನಾರುತ್ತಿತ್ತು.

ಪ್ರಾಣಿಗಳು ಹೊರ ಹಾಕುವ ಮಲ ಇನ್ನೊಂದು ಮುಖ್ಯ ತ್ಯಾಜ್ಯ ಆಶ್ಚರ್ಯವೆಂದರೆ ಈ ಮಲ ರೂಪದ ತ್ಯಾಜ್ಯವು ಸಸ್ಯಗಳಿಗೆ ಅತ್ಯುತ್ತಮ ಆಹಾರ. ಸಸ್ಯಗಳ ಮಟ್ಟಿಗೆ ಪ್ರಾಣಿಗಳೆಂದರೆ ಗೊಬ್ಬರದ ಕಾರ್ಖಾನೆಗಳೆನ್ನ ಬಹುದು. ದೊಡ್ಡ ಮರದ ಕೆಳಗೆ ಬಿದ್ದಿರುವ ಹಣ್ಣುಗಳನ್ನು ತಿಂದುಮೇಯುತ್ತಿರುವ ಪ್ರಾಣಿಗಳು ವಿಸರ್ಜಿಸಿದ ಮಲವು ಮರಕ್ಕೆ ಆಹಾರ ! ಈ ಆಹಾರ ಬಳಸಿ ಸಸ್ಯಗಳು ಬೆಳೆದು ಪ್ರಾಣಿಗಳಿಗೆ ಬೇಕಾದ ಆಮ್ಲಜನಕ ಹಾಗೂ ಹಣ್ಣು, ತರಕಾರಿ ಹಾಗೂ ಇತರ ಆಹಾರ ಪದಾರ್ಥಗಳನ್ನು ಒದಗಿಸುತ್ತವೆ. ಕಸದಿಂದರ ಸಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಇನ್ಯಾವುದಾದರು ಇರಲು ಸಾಧ್ಯವಿದ್ದರೆ ಹೇಳಿರಿ

ಪ್ರಾಣಿಗಳ ಸತ್ತ ದೇಹವನ್ನು ಸ್ಕಾವೆಂಜರ್ಗಳು ತಿಂದು ಮತ್ತೂ ಉಳಿದ ಭಾಗಗಳನ್ನು ಹಾಗು ಸಸ್ಯ ದೇಹದ ಭಾಗಗಳಾದ ಕಾಂಡ ಎಲೆ, ಹಣ್ಣು ತರಕಾರಿ ಇತ್ಯಾದಿಗಳನ್ನು ವಿಲೇವಾರಿ ಮಾಡಲು ಪ್ರಕೃತಿಯಲ್ಲಿ ಇನ್ನೊಂದು ವಿಧದ ಜೀವಿಗಳಿವೆ. ಇವೇ ಸೂಕ್ಷ್ಮಾಣು ಜೀವಿಗಳು. ಈ ಜೀವಿಗಳು ಸತ್ತ ದೇಹವನ್ನು ಪ್ರವೇಶಿಸಿ ಜೀವಕೋಶಗಳನ್ನು ಅದರ ಘಟಕಗಳನ್ನಾಗಿ ವಿಭಜಿಸುತ್ತವೆ. ಹೀಗೆ ಸೂಕ್ಷ್ಮಾಣು ಜೀವಿಗಳು ಸತ್ತ ದೇಹವನ್ನು ಸಣ್ಣ ಮೂಲ ಘಟಕಗಳನ್ನಾಗಿ ವಿಭಜಿಸುವುದನ್ನು ಕೊಳೆಯುವುದು ಎನ್ನುತ್ತೇವೆ. ಹೀಗೆ ಕೊಳೆತ ದೇಹವು ಕೆಲವೇ ದಿವಸಗಳಲ್ಲಿ ಮಣ್ಣಿನೊಂದಿಗೆ ಕೂಡಿಕೊಳ್ಳುತ್ತದೆ.

ಹೀಗೆ ಪ್ರಕೃತಿಯಲ್ಲಿ ತನ್ನ ಮೇಲೆ ಸತ್ತುಬಿದ್ದ ಪ್ರಾಣಿಯಾಗಲಿ, ಅದು ವಿಸರ್ಜಿಸಿದ ಮಲವಾಗಲಿ, ಮರದಿಂದ ಬಿದ್ದ ಎಲೆಯಾಗಲಿ, ಹಣ್ಣಾಗಲಿ ಅದನ್ನು ವಿಲೇವಾರಿ ಮಾಡಿ ಅದರಿಂದ ಇನ್ನೊಂದು ಜೀವಿಗೆ ಉಪಯುಕ್ತವಾದುದನ್ನು ಪಡೆಯುವ ವಿಧಾನವು ಅಂತರ್ಗತವಾಗಿದೆ. ಇದು ಪ್ರಕೃತಿಯು ನೈರ್ಮಲ್ಯವನ್ನು ಕಾಪಾಡಿ ಕೊಳ್ಳುವ ವಿಧಾನವಾಗಿದೆ. ಇದು ಆರೋಗ್ಯದ ದೃಷ್ಟಿಯಲ್ಲಿಯೂ, ವೆಚ್ಚದ ದೃಷ್ಟಿಯಲ್ಲಿಯೂ ಲಾಭದಾಯಕವಾಗಿದೆ. ಪ್ರಕೃತಿಯ ಸಾಮರಸ್ಯವನ್ನು ತೂಗಿಸಿಕೊಂಡು ಹೋಗುವಂತಾದ್ದಾಗಿದೆ. ಹಾಗಾಗಿ ಇದು ತ್ಯಾಜ್ಯವನ್ನು ವಿಲೇವಾರಿ ಮಾಡುವ ಅತ್ಯಂತ ಉತ್ತಮ ವಿಧಾನವೆಂಬುದಕ್ಕೆ ಸಂಶಯವೇ ಇಲ್ಲ.

ಇದು ಕಾಡಿನ ಮಾತಾಯಿತು ಇನ್ನು ನಾಡಿಗೆ ಬರೋಣ.

**ನಾಡಿನಲ್ಲಿ ತಯಾರಾಗುವ ತ್ಯಾಜ್ಯಗಳು ಯಾವುವು?...** **(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು)**

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು.**
**ಸಂಚಾರಿ ದೂರವಾಣಿ ನಂ. : 9845136322**


## THE REGISTRATION OF NEWS PAPERS (CENTRAL) RULES 1956

### SCHEDULE
### FORM OF DECLARATION
### Form 1 (See Rule-3)

I, Aravinda Kumar, Manipal declare that I am the publisher of the Newspaper entitled ìShri Sharada" to be published at Udupi on behalf of Shree Sthanika Dravida Brahmana Sangha,Æ and that particulars in respect of the said News Paper given here under are true to the best of my knowledge and belief .

| | | | |
|---|---|---|---|
| 1. | Title of the News Paper | : | **SHRI SHARADA** |
| 2. | Language in which it is to be published | : | **KANNADA** |
| 3. | Periodicity of this publication | : | a) Monthly<br>b) 15th of every month |
| 4. | Registration No | : | Registered Under No.UDP/ 1260/2015-2017<br>Licenced to Post without Prepayment WPP No. SK/WPP/UDP/81/2015-17 |
| 5. | Retail selling price of the Newspaper per copy | : | Rs 2-50 |
| 6. | Publisherís Name | : | **Aravinda Kumar, Manipal**<br>Secretary, Sri Sthanika Dravida Brahmana Sangha, Æ Kunjibettu, Udupi-576102. |
| 7. | Place of Publication | : | **Sri Sharada Mantapa, Kunjibettu, Udupi - 576102.** |
| 8. | Editorís Name | : | **Sri Krishnakumar Rao, Mattu** |
| | Nationality | : | Indian |
| | Address | : | Sri Sthanika Dravida Brahmana Sangha, Æ Kunjibettu, Udupi-576102. |
| 9. | Printerís Name | : | **Vishnu Moorthy Tantry** |
| | Nationality | : | Indian |
| | Address | : | Agrahara Offsets, Behind Karnataka Bank, Car Street, Udupi - 576101 |
| 10. | Name of the printing press where the Newspaper is actually printed and the true and precise description of the premises on which the press is installed | : | Agrahara Offsets, Behind Karnataka Bank, Car Street Udupi. |
| 11. | Ownerís Name | : | **Sri Sthanika Dravida Brahmana Sangha Æ, Kunjibettu, Udupi-576102** |
| | a) Individual or Firm | : | Firm |
| | b) Whether the owner owns any Newspaper | : | No |
| 12. | Please state whether the declaration is in respect of | : | a) A Monthly Newspaper |

Date : 12-05-2015 Sd/-
Place : UDUPI The Secretary
For Sri Sthanika Dravida Brahmana Sangha (R), Udupi

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ಮತ್ತು ಶ್ರೀ ವಾಂತ್ರಾಡಿ ಶ್ರೀಕಾಂತರಾಯರ ಪುತ್ರ **ವಿವೇಕ್** ಹಾಗೂ ಮುಂಬೈ ನೆರುಲ್‌ನ ಶ್ರೀಮತಿ ಮತ್ತು ಶ್ರೀ ರತನ್‌ಕುಮಾರ್ ರಾವ್ ಇವರ ಪುತ್ರಿ **ಪ್ರಿಯಾಂಕಾ** ಇವರ ವಿವಾಹವು ದಿನಾಂಕ 30-04-2015ರಂದು ಉಡುಪಿ ಕಿದಿಯೂರು ಹೊಟೇಲಿನ ಶೇಷಶಯನ ಹಾಲ್‌ನಲ್ಲಿ ನೆರವೇರಿತು.

★★★ ★★★

ದಿ| ರಾಮಚಂದ್ರರಾಯರ ಪುತ್ರ **ವೈ. ರವಿರಾಜ್** ಹಾಗೂ ದಿ| ಕುಮಾರ್ ವಿಲಾಸ್‌ರಾವ್ ಸೋಲಂಕಿ ಇವರ ಪುತ್ರಿ **ಡಾ| ಪೂನಮ್** ಇವರ ವಿವಾಹವು ದಿನಾಂಕ 08-05-2015ರಂದು ಸಾಂಗ್ಲಿ ವಿಶ್ರಾಮ್‌ಬಾಗಿನ ದಾಂಡೇಕರ್ ಹಾಲ್‌ನಲ್ಲಿ ನೆರವೇರಿತು.

★★★ ★★★

ಕೀರ್ತಿಶೇಷ ರತ್ನಾಕರ ರಾವ್ ಬಪ್ಪನಾಡು ಇವರ ಪುತ್ರ **ಭೋಜರಾಜ್** ಹಾಗೂ ಪಡುಬೆಳ್ಳೆ ಶ್ರೀಮತಿ ಮತ್ತು ಶ್ರೀ ಚಂದ್ರಶೇಖರರಾವ್ ಇವರ ಪುತ್ರಿ **ಪಲ್ಲವಿ** ಇವರ ವಿವಾಹವು ದಿನಾಂಕ 20-05-2015ರಂದು ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಮುದರಂಗಡಿಯ ಶ್ರೀಮತಿ ಇಂದಿರಾ ಮತ್ತು ಶ್ರೀ ಪಿ.ಬಾಲಕೃಷ್ಣರಾವ್ ಇವರ ಪುತ್ರ **ಆಕಾಶ್** ಹಾಗೂ ಪೆರ್ಡೂರು ಶ್ರೀಮತಿ ಪುಷ್ಪಲತಾ ಮತ್ತು ಶ್ರೀಕೃಷ್ಣರಾಜ ಇವರ ಪುತ್ರಿ **ಶ್ರುತಿ** ಇವರ ವಿವಾಹವು ದಿನಾಂಕ 25-05-2015ರಂದು ಶ್ರೀ ಕ್ಷೇತ್ರ ಬಪ್ಪನಾಡು 'ಜ್ಞಾನ ಮಂದಿರ'ದಲ್ಲಿ ನೆರವೇರಿತು.

★★★ ★★★

ಐವರ್ನಾಡು ಶ್ರೀಮತಿ ಶಾಂತಾ ಮತ್ತು ಶ್ರೀ ಐ ಪ್ರಭಾಕರರಾವ್ ಇವರ ಪುತ್ರ **ಪ್ರಶಾಂತ** ಹಾಗೂ ಕಂಗುಳಿ ಶ್ರೀಮತಿ ರೇಖಾ ಮತ್ತು ಶ್ರೀ ಯೋಗೀಶರಾಯರ ಪುತ್ರಿ **ಪರಿಮಳ** ಇವರ ವಿವಾಹವು ದಿನಾಂಕ 27-05-2015ರಂದು ಮಂಗಳೂರು ಬಿಜೈಯ ಶ್ರೀ ಸುಬ್ರಹ್ಮಣ್ಯ ಸಭಾ ಭವನದಲ್ಲಿ ನೆರವೇರಿತು.

★★★ ★★★

ಉಡುಪಿ ಒಳಕಾಡು ಶ್ರೀಮತಿ ಸರಸ್ವತಿ ಮತ್ತು ಶ್ರೀ ರಮೇಶ ಶ್ಯಾನುಭಾಗರ ಪುತ್ರ **ವಿಶ್ವಜಿತ** ಹಾಗೂ ನಾರಾವಿ ಪಿಲ್ಯೊಟ್ಟು ಶ್ರೀಮತಿ ರೇಣುಕಾ ಮತ್ತು ಶ್ರೀ ಲಕ್ಷ್ಮೀನಾರಾಯಣ ರಾಯರ ಪುತ್ರಿ **ಸವಿತಾ** ಇವರ ವಿವಾಹವು ದಿನಾಂಕ 28-05-2015ರಂದು ಉಡುಪಿ ಒಳಕಾಡಿನ ಶ್ರೀ ಪದ್ಮಾವತಿ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಹೊಗೆಗುಡ್ಡೆ ಶ್ರೀಮತಿ ಶ್ಯಾಮಲಾ ಮತ್ತು ಶ್ರೀ ಹರಿಕೃಷ್ಣ ಭಟ್ ಇವರ ಪುತ್ರ **ಧನಂಜಯ** ಹಾಗೂ ಶ್ರೀಮತಿ ಸುಧಾ ಮತ್ತು ಶ್ರೀ ಭಾಸ್ಕರರಾವ್ ಚೊಕ್ಕಾಡಿ ಪುತ್ರಿ **ಜ್ಯೋತಿಶ್ರೀ** ಇವರ ವಿವಾಹವು ದಿನಾಂಕ 31-05-2015 ರಂದು ಕುಂಜೂರು ಶ್ರೀ ದುರ್ಗಾ ದೇವಸ್ಥಾನದಲ್ಲಿ ನೆರವೇರಿತು.

ಮುಕ್ಕ ಶ್ರೀಮತಿ ಸುಮತಿ ಮತ್ತು ಶ್ರೀ ರಾಜರತ್ನಾಕರ ರಾವ್ ಇವರ ಪುತ್ರ **ಅವಿನಾಶ್** ಹಾಗೂ ಸಕ್ಕಟ್ಟು ಶ್ರೀಮತಿ ಶಾಂಭವಿ ಮತ್ತು ಶ್ರೀ ಜಯರಾಮರಾಯರ ಪುತ್ರಿ **ಶರಣ್ಯ** ಇವರ ವಿವಾಹವು ದಿನಾಂಕ 08-06-2015 ರಂದು ಉಡುಪಿ ಪುತ್ತೂರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಶ್ರೀ ಭಗವತೀ ಸಭಾಗೃಹದಲ್ಲಿ ನೆರವೇರಿತು.

★★★ ★★★

ಪಾದೆಬೆಟ್ಟು ಶ್ರೀಮತಿ ವಸಂತಿ ಮತ್ತು ಶ್ರೀ ಶಂಕರರಾಯರ ಪುತ್ರ **ನಾಗರಾಜ ರಾವ್** ಹಾಗೂ ವಕ್ವಾಡಿ ಶ್ರೀಮತಿ ಶಾರದಾ ಮತ್ತು ಶ್ರೀ ಕೃಷ್ಣಮೂರ್ತಿ ಹೆಬ್ಬಾರರ ಪುತ್ರಿ **ಉಷಾ ಕುಮಾರಿ** ಇವರ ವಿವಾಹವು ದಿನಾಂಕ 11-06-2015ರಂದು ಕುಂದಾಪುರ ಹಂಗಳೂರು ಅನಂತ ಪದ್ಮನಾಭ ಸಭಾಗೃಹದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಇಂದಿರಾ ಮತ್ತು ಶ್ರೀ ಎರ್ಮಾಳು ರಾಮಚಂದ್ರರಾಯರ ಪುತ್ರ **ನರೇಶ** ಹಾಗೂ ಕೊಳ್ಳೂರು ಶ್ರೀಮತಿ ಧನಲಕ್ಷ್ಮೀ ಮತ್ತು ಶ್ರೀ ರಾಧಾಕೃಷ್ಣ ಭಟ್ಟರ ಪುತ್ರಿ **ಹರ್ಷಿತಾ** ಇವರ ವಿವಾಹವು ದಿನಾಂಕ 11-06-2015ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ ಶ್ರೀ ಶಾರದ್ವತ ಯಜ್ಞಾಂಗಣದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಸರೋಜಾ ಮತ್ತು ಶ್ರೀ ಮಾರ್ಪಳ್ಳಿ ಸಚ್ಚಿದಾನಂದ ರಾವ್ ಇವರ ಪುತ್ರ **ಸುಬ್ಬರಾವ್** ಹಾಗೂ ನಿಟ್ಟೂರು ಅಡ್ಡಕಟ್ಟೆ ಶ್ರೀಮತಿ ಸುಂದರಿ ಮತ್ತು ಶ್ರೀ ಜಗದೀಶರಾವ್ ತಂತ್ರಾಡಿ ಇವರ ಪುತ್ರಿ **ರಶ್ಮಿ** ಇವರ ವಿವಾಹವು ದಿನಾಂಕ 08-06-2015 ರಂದು ಉಡುಪಿ ಕುಂಜಿಬೆಟ್ಟು ಶಾರದಾ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಮತ್ತು ಶ್ರೀ ಹೆಚ್.ಸೂರ್ಯ ಪ್ರಕಾಶ್ ರಾವ್ ಮೈರ್‌ಕೊಮೆ ಇವರ ಪುತ್ರ **ಅನಂತರಾಮ** ಹಾಗೂ ಶ್ರೀಮತಿ ರೋಹಿಣಿ ಮತ್ತು ಶ್ರೀ ರಾಧಾಕೃಷ್ಣ ರಾವ್ ಉಬರಳೆ ಇವರ ಪುತ್ರಿ **ಮಂಜುಶ್ರೀ** ಇವರ ವಿವಾಹವು ದಿನಾಂಕ 29-05-2015ರಂದು ಪುತ್ತೂರು ರಾಮಕುಂಜದ ಶ್ರೀರಾಮಕುಂಜೇಶ್ವರ ದೇವಾಲಯದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಇಂದಿರಾ ಶಾಸ್ತ್ರಿ ಮತ್ತು ಶ್ರೀ ಗಣೇಶ್ ಶಾಸ್ತ್ರಿಯವರ ಪುತ್ರ **ಸದಾನಂದ** ಹಾಗೂ ಶ್ರೀಮತಿ ಗೀತಾ ಮತ್ತು ಶ್ರೀ ಉದ್ಯಾವರ ವಿಜಯ ಕುಮಾರ್‌ರವರ ಪುತ್ರಿ **ಅಮೃತಾ** ಇವರ ವಿವಾಹವು ದಿನಾಂಕ 31-05-2015 ರಂದು ಬೆಂಗಳೂರು ಕೊಡಿಗೆಹಳ್ಳಿ ಜ್ಞಾನಶಕ್ತಿ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಕುಸುಮಾ ಶ್ಯಾನುಭೋಗ್ ಮತ್ತು ಶ್ರೀ ಮಂಜುನಾಥ ಶ್ಯಾನುಭೋಗ್ ಇವರ ಪುತ್ರ **ರವಿಕೃಷ್ಣ** ಹಾಗೂ ಶ್ರೀಮತಿ ಮತ್ತು ಶ್ರೀ ಮಣಿಕಳ ಶ್ರೀಧರ ರಾಯರ ಪುತ್ರಿ **ಅಕ್ಷತಾ** ಇವರ ವಿವಾಹವು ದಿನಾಂಕ 10-05-2015ರಂದು ಪುತ್ತೂರು ಕೆಮ್ಮಿಂಜೆಯ ಶ್ರೀ ಷಣ್ಮುಖ ಮಹಾವಿಷ್ಣು ಸಭಾಭವನದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಬೇಬಿ ಎಮ್.ರಾವ್ ಮತ್ತು ಶ್ರೀ ಹಾವಂಜೆ ಮಂಜುನಾಥ ರಾವ್ ಇವರ ಪುತ್ರ **ವಿಶು ರಾವ್** ಹಾಗೂ ಶ್ರೀಮತಿ ವಿದ್ಯಾ ಮತ್ತು ದಿ| ನಾರಾಯಣ ಇವರ ಪುತ್ರಿ **ಅಕ್ಷತಾ** ಇವರ ವಿವಾಹವು ದಿನಾಂಕ 11-06-2015 ರಂದು ಹಾವಂಜೆ ಮಾಹಾಲಿಂಗೇಶ್ವರ ದೇವಸ್ಥಾನದ ಸಭಾಭವನದಲ್ಲಿ ನೆರವೇರಿತು.

## ಮಿಥುನ ಮಾಸದ ವಿಶೇಷ ದಿನಗಳು

| | |
|---|---|
| 15-06-2015 | ಮಿಥುನ ಸಂಕ್ರಮಣ |
| 16-06-2015 | ಅಮವಾಸ್ಯಾ, |
| 22-06-2015 | ಆರ್ದ್ರಾ ನಕ್ಷತ್ರಾರಂಭ |
| 28-06-2015 | ಸರ್ವೈಕಾದಶೀ, |
| 29-06-2015 | ಪ್ರದೋಷಃ |
| 02-07-2015 | ಪೂರ್ಣಿಮಾ, |
| 05-07-2015 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ-10.03ಕ್ಕೆ |
| 06-07-2015 | ಪುನರ್ವಸು ನಕ್ಷತ್ರಾರಂಭ |
| 12-07-2015 | ಸರ್ವೈಕಾದಶೀ |
| 13-07-2015 | ಪ್ರದೋಷಃ |
| 16-07-2015 | ಕರ್ಕಾಟಕ ಸಂಕ್ರಮಣ ಅಮವಾಸ್ಯಾ |

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ | : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ: | **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ: | **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ | : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ | : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.05-07-2015) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.21-06-2015 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.01-07-2015 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ನಿಧನ

### ವೆಂಕಟೇಶ್‌ರಾವ್

ಶಿರ್ವ ಮಂಚಕಲ್ ನಿವಾಸಿ ನಿವೃತ್ತ ಅಧ್ಯಾಪಕ ವೆಂಕಟೇಶರಾವ್ (78ವರ್ಷ) ಅವರು ದಿನಾಂಕ 02-06-2015ರಂದು ಮಂಚಕಲ್‌ನ ಸ್ವಗೃಹದಲ್ಲಿ ನಿಧನರಾದರು. ಕುಂಜಾರು ಗಿರಿಜಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗಿ ವೃತ್ತಿ ಜೀವನ ಪ್ರಾರಂಭಿಸಿದ ಇವರು ಶಿರ್ವ ಸೈಂಟ್ ಮೇರಿಸ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ನಿವೃತ್ತರಾಗಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

### ರಂಜನಿ ಎಂ ರಾವ್

ಕುಂಜಾರುಗಿರಿ ಪಾಜೈ ನಿವಾಸಿ ಶ್ರೀ ಮಾಧವರಾವ್ ಅವರ ಧರ್ಮಪತ್ನಿ ರಂಜನಿ ಎಂ ರಾವ್(78ವರ್ಷ) ದಿನಾಂಕ 04-06-2015ರಂದು ಅಲ್ಪಕಾಲದ ಅಸೌಖ್ಯದಿಂದ ಸ್ವಗೃಹದಲ್ಲಿ ನಿಧನರಾದರು. ಮೃತರು ಪತಿ ಶ್ರೀ ಮಾಧವರಾವ್ ಸಹಿತ ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿ ಮತ್ತು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

### ಇಂದಿರಾ ಎಸ್. ರಾವ್

ಬೆಟ್ಟಂಪಾಡಿ ಶ್ರೀ ಶಿವರಾಮರಾಯರ ಧರ್ಮಪತ್ನಿ ಇಂದಿರಾ ಎಸ್ ರಾವ್(72ವರ್ಷ) ಇವರು ಪುತ್ತೂರಿನ ಮುರದ ಸ್ವಗೃಹದಲ್ಲಿ ಅಸೌಖ್ಯದಿಂದ ದಿನಾಂಕ 05-06-2015ರಂದು ನಿಧನರಾದರು. ಮೂಲತಃ ಕರ್ವಾಲಿನವರಾದ ಮೃತರು ಪತಿ ಶ್ರೀ ಶಿವರಾಮರಾವ್ ಸಹಿತ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಮತ್ತು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

### ಯು.ಕೃಷ್ಣಪ್ರಸಾದ್ ರಾವ್

ಮಂಗಳೂರು ಕೊಟ್ಟಾರಚೌಕಿ ನಿವಾಸಿ ಯು.ಕೃಷ್ಣಪ್ರಸಾದ್ ರಾವ್ (66 ವರ್ಷ)ರವರು ದಿನಾಂಕ 24-05-2015ರಂದು ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

### ಪ್ರೊ| ವಿದ್ಯಾಶಂಕರ ತುದಿಯಡ್ಕ

ಹಿರಿಯ ಸಾಹಿತಿಗಳಾಗಿದ್ದ ದಿ| ತುದಿಯಡ್ಕ ವಿಷ್ಣ್ವಯ್ಯನವರ ಪುತ್ರರಾದ ಪ್ರೊ| ವಿದ್ಯಾಶಂಕರ ತುದಿಯಡ್ಕ (54) ಇವರು 02-06-2015ರಂದು ಅಸೌಖ್ಯದಿಂದ ನಿಧನರಾದರು. ಇವರು ಮಂಗಳೂರು ಎಸ್‌ಡಿಎಮ್ ಕಾನೂನು ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿದ್ದು, ಪುತ್ತೂರು ವಿವೇಕಾನಂದ ಕಾನೂನು ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲರಾಗಿ ಸೇವೆಸಲ್ಲಿಸಿದ್ದರು. ಮೃತರು ತಾಯಿ, ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

### ಕುಮುದ್ವತಿ

ಕುಂಭಾಶಿಯಲ್ಲಿ ವಾಸ್ತವ್ಯದಲ್ಲಿದ್ದ ಐ.ಪಿ.ರವೀಂದ್ರರವರ ಧರ್ಮಪತ್ನಿ ಕುಮುದ್ವತಿಯವರು (63 ವರ್ಷ) ಅಲ್ಪಕಾಲದ ಅಸೌಖ್ಯದಿಂದ 09-06-2015ರಂದು ಸ್ವಗೃಹದಲ್ಲಿ ನಿಧನರಾದರು. ಮೃತರು ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

## ಗೃಹ ಪ್ರವೇಶ

ಪೆರ್ಡೂರು ಶ್ರೀಮತಿ ವಾಣಿ ಮತ್ತು ಶ್ರೀ ರವೀಂದ್ರ ಭಂಡಿ (ಶ್ರೀಮತಿ ಲೀಲಾ ಮತ್ತು ಶ್ರೀ ಭಂಡಿ ಗೋಪಾಲಕೃಷ್ಣರಾವ್ ದಂಪತಿಗಳ ಪುತ್ರ)ಯವರು ಪೆರ್ಡೂರು ಅನಂತ ಪದ್ಮನಾಭ ದೇವಸ್ಥಾನದ ಬಳಿ ನಿರ್ಮಿಸಿದ ನೂತನ ಮನೆ **'ವನಜ ಲೀಲಾ'**ದ ಪ್ರವೇಶೋತ್ಸವವನ್ನು ದಿನಾಂಕ25-05-2015ರಂದು ನೆರವೇರಿಸಿದರು.

★★★ ★★★

ಕಿನ್ನಿಕಂಬಳದ ಶ್ರೀಮತಿ ರಮಾದೇವಿ ಮತ್ತು ಶ್ರೀ ಎಂ ವೆಂಕಪ್ಪಯ್ಯ ಮತ್ತು ಮಕ್ಕಳು ಮಂಗಳೂರು ಕಿನ್ನಿಕಂಬಳದ ರಾಧಾಕೃಷ್ಣ ಭಜನಾ ಮಂದಿರದ ಬಳಿ ನಿರ್ಮಿಸಿದ ನೂತನ ಮನೆ **'ಸಂತೃಪ್ತಿ'**ಯ ಪ್ರವೇಶೋತ್ಸವ ವನ್ನು ದಿನಾಂಕ 29-05-2015ರಂದು ನೆರವೇರಿಸಿದರು.

★★★ ★★★

ಶ್ರೀಮತಿ ಮತ್ತು ಶ್ರೀ ಜಯಶೀಲ ರಾವ್ ಮಲ್ಲಮಾರು ಇವರು ಮಲ್ಲಮಾರಿನಲ್ಲಿ ನಿರ್ಮಿಸಿದ ನೂತನ ಮನೆ **'ವಾಸುಕಿ'** ಇದರ ಪ್ರವೇಶೋತ್ಸವವನ್ನು ದಿನಾಂಕ 04-06-2015 ರಂದು ನೆರವೇರಿಸಿದರು.

★★★ ★★★

ಶ್ರೀಮತಿ ವಿನಯ ಮತ್ತು ಶ್ರೀ ಜಗದೀಶ ಉಪಾಧ್ಯಾಯ (ಶ್ರೀ ಪಾವಂಜೆ ವಾಸುದೇವ ಉಪಾಧ್ಯಾಯರ ಪುತ್ರ) ದಂಪತಿಗಳು ಪಡುಬಿದ್ರಿಯಲ್ಲಿ ನಿರ್ಮಿಸಿದ ನೂತನ ಮನೆ **'ಶ್ರೀಶ ವಿಜಯ'**ದ ಪ್ರವೇಶೋತ್ಸವವನ್ನು ದಿನಾಂಕ 12-06-2015ರಂದು ನೆರವೇರಿಸಿದರು.

## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ಆಕರ್ಷಕ ಬಡ್ಡಿದರದಲ್ಲಿ **ಶಿಕ್ಷಣ ಸಾಲ**

ಸಂಘದ ಪ್ರಾಥಮಿಕ ಸದಸ್ಯರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಶೇಕಡಾ 13% ಬಡ್ಡಿದರದಲ್ಲಿ ಶಿಕ್ಷಣ ಸಾಲ ನೀಡಲಾಗುವುದು.

**ಹೆಚ್ಚಿನ ವಿವರಗಳಿಗೆ ಪ್ರಧಾನ ಕಛೇರಿ ಮತ್ತು ಶಾಖೆಗಳನ್ನು ಸಂಪರ್ಕಿಸಿರಿ**

ಪ್ರಧಾನ ಕಛೇರಿ – ದೂರವಾಣಿ : 2522408
ಕುಕ್ಕಿಕಟ್ಟೆ ಶಾಖೆ – ದೂರವಾಣಿ : 2592133
ಪಡುಬಿದ್ರಿ ಶಾಖೆ – ದೂರವಾಣಿ : 2556608
ಕೋಟೇಶ್ವರ ಶಾಖೆ – ದೂರವಾಣಿ : 9341854114

ಕುಕ್ಕಿಕಟ್ಟೆ ಶಾಖಾ ಕಛೇರಿಯನ್ನು ಪಕ್ಕದ ನವಭಾಗ್ಯ ಸಂಕೀರ್ಣ, 32.ನಂಬ್ರ 3/7/2ಎ, ಕುಕ್ಕಿಕಟ್ಟೆ ಇಲ್ಲಿಗೆ ಸ್ಥಳಾಂತರಿಸಲಾಗಿದೆ. ಸದಸ್ಯರೆಲ್ಲರೂ ವ್ಯವಹಾರದಲ್ಲಿ ಸಹಕರಿಸಬೇಕಾಗಿ ವಿನಂತಿ.

## ವೈವಾಹಿಕ ಸ್ವರ್ಣಮಹೋತ್ಸವ




**ಶ್ರೀಮತಿ ರಾಜೇಶ್ವರಿ ಶ್ಯಾನುಭಾಗ್ ಮತ್ತು ಶುಭಾಕರ್ ಶ್ಯಾನುಭಾಗ್**

ಇವರ ಉತ್ಸಾಹಕ್ಕೆ ಕಾರಣ ಉಲ್ಲಾಸಕ್ಕೆ ತೋರಣ ಪ್ರೇಮಕ್ಕೆ ಪ್ರೇರಣೆಯಾದ ವೈವಾಹಿಕ ಸ್ವರ್ಣಮಹೋತ್ಸವವನ್ನು 'ಶ್ರೀ ಸುಬ್ರಹ್ಮಣ್ಯ ಸಭಾ' ಮಂಗಳೂರಿನಲ್ಲಿ ತಾ.17-05-2015ರಂದು ವೈಭವ ಪೂರ್ಣವಾಗಿ ಆಚರಿಸಲಾಯಿತು. ಮುಂದೆ ವೈವಾಹಿಕ ವಜ್ರ ಮಹೋತ್ಸವವನ್ನು ಇದೇ ರೀತಿ ವೈಭವಯುತವಾಗಿ ಆಚರಿಸುವಂತೆ ಪರಮಾತ್ಮನು ಅನುಗ್ರಹಿಸಲಿ ಎಂದು ಬೇಡಿಕೊಳ್ಳುವ

**ಮಕ್ಕಳು, ಅಳಿಯ, ಸೊಸೆ, ಮೊಮ್ಮಕ್ಕಳು, ಮರಿಮಗು, ಸಹೋದರ, ಸಹೋದರಿಯರು ಹಾಗೂ ಬಂಧು ಬಳಗದವರು.**



ತಂತ್ರಾಡಿ ವಿಶ್ವನಾಥ ಶಾನುಭೋಗ್ 94487 24161 97417 85551

## ಹರಿಕೃಷ್ಣ ಡಿಜಿಟಲ್ಸ್


ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102


ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

*Krishna Rao* Ph : 2520652 Mob. : 9902029048

## KISHAN



**Studio & Video**



Indoor Photography & Port Folio Photography, Video & Mixing, Lamination

MAIN ROAD, MAJOOR & BANTAKAL.

## ಶ್ರೀ ಮಾತಾ ಜ್ಯೋತಿಷ್ಯಾಲಯ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

## ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧಿತ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.


**ವೇದಮೂರ್ತಿ ಚಿದಾನಂದ ಭಟ್**

#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010

ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

ಮೊಬೈಲ್- 9886629697, 9986119865

ಪ್ರೊ : ಸುಧಾಕರ್ ರಾವ್ ಬೆಳ್ಳೆ




## ಶ್ರೀಮಾತಾ ಇಲೆಕ್ಟ್ರಾನಿಕ್ಸ್

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ, ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

## ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ| ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಎಮ್. ದೇವಾನಂದ್ ಭಟ್ Cell : 9845644556 9483913344

## ಶೋಭಾ ಡಿಜಿಟಲ್

ಸ್ಟುಡಿಯೋ & ವೀಡಿಯೊ



ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org